ಜನಪದ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ನವೆಂಬರ್ -೨೦೧೫ ಸಂಚಿಕೆ - ೪

ಸೈದ್ಧಾಂತಿಕವಾಗಿ ಮೋದಿ ವಿರುದ್ಧ ಗಾಂಧಿಯನ್ನು ನಿಲ್ಲಿಸಬೇಕಿದೆ

*

ಗಾಂಧಿ ಹೀಗೆ ಹೇಳಿದ್ದಾರೆ...ಕೇಳಿ

*

ಸ್ತ್ರೀ-ಶಕ್ತಿ ಎಲ್ಲೆಡೆಗೂ ಹರಡಲಿ

ಜನಪದ ವಿಚಾರದಲ್ಲಿ

ನವೆಂಬರ್ - ೨೦೧೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವಂಬರ್ - ೨೦೧೫

ಸಂಪುಟ - ೧೬

ಸಂಚಿಕೆ - ೪

ಸಂಪಾದಕ

ಸುರೇಂದ್ರ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)

ಮೇಲುಕೋಟೆ - 571431

ಮಂಡ್ಯ ಜಿಲ್ಲೆ

ಫೋನ್ : 9141700812

08236 - 299854

email :

janapada@yahoo.com

Web: janapada.org

ಅಲೆಮಾರಿಗಳ ಹಾಡು

ಊರೂರು ಅಲೆದುಬಂದಿದ್ದೇವೆ
ಇಂದಿಲ್ಲಿ ಬೀಡುಬಿಟ್ಟಿದ್ದೇವೆ.
ಸುತ್ತಿದ್ದೇವೆ ಹತ್ತೂರು ಬಯಲು ಕಾನು
ವಿಶಾಲವಾಗಿದೆ ಬುವಿಬಾನು.
ನಮ್ಮವೇ ಬಳಗ ಹಸುಕರು, ನಾಯಿಗಳು
ನಿಯತ್ತಿನಿಂದದ ಬರುವ ಹಿಂಬಾಲಕರು
ಪ್ರೀತಿಯ ಸಂಗಾತಿಗಳು.

ಈಗಷ್ಟೇ ಬಿಡಿಸಿ ಕಟ್ಟಿದಮನೆ
ಬೆಚ್ಚಗಿನ ಆಸರೆ
ಮತ್ತೆ ಒಯ್ಯುತ್ತೇವೆ ಬೇರೊಂದು ಊರಿಗೆ
ನೆಲಕ್ಕೂ ಮನೆಗೂ ತೆರಿಗೆಯ ಚಿಂತೆಯಿಲ್ಲ
ನೆರೆಕರೆಯವರ ಕಿರಿಕಿರಿಯಿಲ್ಲ.
ಪುರುಲೆ ಆರಿಸಿ, ಬೆಂಕಿಯುರಿಸಿ,
ಹೊಗೆಯೂದಿ
ಬೇಯಿಸಿ ಉಂಡರೆ ಬೇರೆ
ಯೋಚನೆಯಿಲ್ಲ.

ಇಂದು ಇಂದಿಗೆ ನಾಳೆ ನಾಳೆಗೆ
ಮತ್ತೆ ಇನ್ನೊಂದೂರು, ಹೊಸ ಕಾಯಕ
ರಟ್ಟೆ ಮುರಿಯ ದುಡಿಯುತ್ತೇವೆ
'ಎಲ್ಲಿಯೂ ನಿಲ್ಲದಿರು
ಮನೆಯನೆಂದೂ ಕಟ್ಟದಿರು'
ಎಂಬುದು ಕವಿವಾಣಿ.
ಅದರ ಅರಿವು ನಮಗಿಲ್ಲ
ಆ ಚಿಂತೆಯೂ ಇಲ್ಲ!

– ಸವಿತಾ ಎನ್. ಭಟ್, ಅಡ್ವಾಯಿ

– ಸಾಭಾರ : ಮಯೂರ

ಚಿಂತನೆಗೊಂದು ಸಂಗತಿ

ತೆಲಂಗಣ ರಾಜ್ಯ ರಚನೆಯ ನಂತರ ಉಳಿದಿರುವ ಆಂಧ್ರ ಪ್ರದೇಶ ರಾಜ್ಯಕ್ಕೆ ಹೊಸ ರಾಜಧಾನಿಯೊಂದನ್ನು ಕಟ್ಟುವ ಪ್ರಯತ್ನ ನಡೆದಿದೆ. ರಾಜಧಾನಿಯ ಹೆಸರು ಅಮರಾವತಿ. ಅಮರಾವತಿಯನ್ನು ನಿರ್ಮಿಸಲು ಸಿಂಗಪುರದ ಕಂಪೆನಿಯನ್ನು ಗೊತ್ತುಮಾಡಲಾಗಿದೆ. ಭಾರತದಲ್ಲಿ ಕೇಂದ್ರ ಸರ್ಕಾರದ ಯೋಜನೆಯ ಮೇರೆಗೆ ನಿರ್ಮಾಣಗೊಳ್ಳಲಿರುವ ನೂರು ಸ್ಮಾರ್ಟ್ ಸಿಟಿಗಳಿಗೆಲ್ಲ ಆದರ್ಶಪ್ರಾಯವಾಗುವಂಥ ರೀತಿಯಲ್ಲಿ ಅಮರಾವತಿಯನ್ನು ಕಟ್ಟಲು ಯೋಜಿಸಲಾಗಿದೆ. ೨೧ನೇ ಶತಮಾನಕ್ಕನುಗುಣವಾದ ರೀತಿಯಲ್ಲಿ ಅದು ರೂಪಗೊಳ್ಳಲಿದೆ. ಆದರೆ ಈ ರಾಜಧಾನಿಯನ್ನು ನಿರ್ಮಿಸಲು ಆಯ್ಕೆಯಾದ ಪ್ರದೇಶ ಕೃಷ್ಣನದಿಯ ತೀರ ಪ್ರದೇಶ. ಈ ಪ್ರದೇಶ ಬಹಳ ಫಲವತ್ತಾದುದು. ಕೇವಲ ಹದಿನೈದರಿಂದ ಇಪ್ಪತ್ತು ಅಡಿ ಆಳದಲ್ಲಿ ನೀರು ಸಿಗುವಂಥ ಭೂ ಪ್ರದೇಶ. ಅಮರಾವತಿ ಪೂರ್ಣವಾಗಿ ನಿರ್ಮಾಣಗೊಳ್ಳುವ ಹೊತ್ತಿಗೆ ೨೧೭ ಚದುರ ಕಿಲೋಮೀಟರ್‌ನಷ್ಟು ಭೂ ಪ್ರದೇಶ ಕಬಳಿಸಲ್ಪಟ್ಟಿರುತ್ತದೆ. ರಾಜಧಾನಿಗೆ ಸಂಬಂಧಿಸಿದ ಪ್ರದೇಶ ೭,೪೨೦ ಚದುರಕಿಲೋಮೀಟರ್ ನಷ್ಟಾಗುತ್ತದೆ. ರಾಜಧಾನಿಗಾಗಿ ಭೂ ಪ್ರದೇಶವನ್ನು ಆಯ್ಕೆಮಾಡುವಾಗ ಆಯ್ಕೆಸಮಿತಿ ಹಾಕಿದ್ದ ಪರಿಸರಾತ್ಮಕ ನಿಯಮಾವಳಿಗಳನ್ನೆಲ್ಲ ಧಿಕ್ಕರಿಸಲಾಗಿದೆ. ಅಲ್ಲಿಯ ಭೂಮಿಯ ಬೆಲೆ ಗಗನಕ್ಕೇರಿದೆ. ರಿಯಲ್ ಎಸ್ಟೇಟ್ ವ್ಯವಹಾರಿಗಳ ಹಾವಳಿಯನ್ನು ತಡೆಯುವುದಕ್ಕಾಗುತ್ತಿಲ್ಲ. ಹೀಗೆ ಹೊಸ ಹೊಸ ಅಭಿವೃದ್ಧಿ ಯೋಜನೆಗಳಿಂದಾಗಿ ದೇಶದ ಕೃಷಿಭೂಮಿ ತೀವ್ರಗತಿಯಲ್ಲಿ ಕಡಿಮೆಯಾಗುತ್ತಿದೆಯಷ್ಟೆ ಅಲ್ಲದೆ ಗ್ರಾಮಗಳು ನಗರಗಳ ಹೊಟ್ಟೆಯಲ್ಲಿ ಸೇರಿಕೊಳ್ಳುತ್ತಿವೆ. ಇದು ಕಟು ಸತ್ಯ ಸಂಗತಿಯಾಗಿದ್ದರೂ ಕೆಲ ಅಂಕಿ ಸಂಖ್ಯೆಗಳ ಪರಿಣಿತರ ಪ್ರಕಾರ ವ್ಯವಸಾಯ ಕ್ಷೀಣಿಸುತ್ತಿಲ್ಲ. ಹಳ್ಳಿಗರು ವ್ಯವಸಾಯ ಬಿಟ್ಟು ನಗರಗಳಿಗೆ ಬರಬೇಕೆಂದು ಹೇಳುತ್ತಾರೆ. ಅಂಗೈ ಹುಣ್ಣನ್ನು ನೋಡಲು ಕನ್ನಡಿ ಅಗತ್ಯವಿರುವುದಿಲ್ಲ. ನೀತಿ ಆಯೋಗದ ಯೋಜನೆಗಳಿಗೆ ತಪ್ಪುದಾರಿ ತೋರಿಸುತ್ತಿರುವ ಅಂಕಿ ಸಂಖ್ಯೆಗಳ ತಜ್ಞರಿಗೆ ಶಿಕ್ಷೆಯಿಲ್ಲವೆ?

ಸೈದ್ಧಾಂತಿಕವಾಗಿ ಮೋದಿ ವಿರುದ್ಧ ಗಾಂಧಿಯನ್ನು ನಿಲ್ಲಿಸಬೇಕಿದೆ

– ಸುರೇಂದ್ರ ಕೌಲಗಿ

ಶ್ರೀ ನರೇಂದ್ರ ಮೋದಿ ಭಾರತೀಯ ಜನತಾಪಕ್ಷದ ನಾಯಕರಾಗಿ ಆಯ್ಕೆಗೊಂಡು ದೇಶದ ಪ್ರಧಾನಮಂತ್ರಿಯಾದಾಗಿನಿಂದ ಅವರು ಅನುಸರಿಸುತ್ತಿರುವ ಅರ್ಥನೀತಿ ಮತ್ತು ಕೈಗಾರಿಕಾ ನೀತಿ ವಿವಾದಾಸ್ಪದವಾಗಿದೆ. ಅಷ್ಟೇ ಅಲ್ಲ, ಜನರಲ್ಲಿ ಅಸಂತೋಷಕ್ಕೂ ಕಾರಣವಾಗಿದೆ. ಈ ಎರಡು ನೀತಿಗಳಲ್ಲದೆ ಅವರ ಸರ್ಕಾರ ಜಾರಿಗೊಳಿಸುತ್ತಿರುವ ಶಿಕ್ಷಣ ನೀತಿಯೂ ವಿವಾದಾಸ್ಪದವಾಗಿದೆ. ಇವೆಲ್ಲವುಗಳಿಗಿಂತ ಹೆಚ್ಚಾಗಿ ದೇಶದ ಮೂಲಭೂತ ದ್ರವ್ಯಗಳಾದ ಬಹುತ್ವ, ಧರ್ಮ ಸೌಹಾರ್ದತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳ ಮೇಲೆ ಪರೋಕ್ಷ ಹಾಗೂ ಅಪರೋಕ್ಷವಾಗಿ ಪ್ರಹಾರ ಬೀಳುತ್ತಿದೆ. ದುಡಿಮೆ ಮತ್ತು ಅನ್ನಕಾಯಕದ ಪ್ರತಿನಿಧಿಯಾದ ರೈತರು ನಿರಂತರವಾಗಿ ಆತ್ಮಹತ್ಯೆಮಾಡಿಕೊಳ್ಳುತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿನಿಧಿಗಳಾದ ಸಾಹಿತ್ಯಗಾರರು ತಮ್ಮ ವೈಚಾರಿಕ ಸಾಧನೆಗಾಗಿ ಪಡೆದಿದ್ದ ಪ್ರಶಸ್ತಿಗಳನ್ನು ಮತ್ತು ನಗದು ಬಹುಮಾನಗಳನ್ನು ಸಂಬಂಧಪಟ್ಟವರಿಗೆ ಹಿಂದಿರುಗಿಸುತ್ತಿದ್ದಾರೆ.

ಇತ್ತೀಚೆಗೆ ಮೋದಿಯವರ ಪಕ್ಷದ ಹಿರಿಯ ರಾಜಕೀಯ ಮುತ್ಸದ್ದಿಯಾದ ಎಲ್.ಕೆ.ಅಡ್ವಾಣಿಯವರು ತುರ್ತುಪರಿಸ್ಥಿತಿಯ ೪೦ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಹೇಳಿದಂತೆ ಇನ್ನೊಂದು ತುರ್ತುಪರಿಸ್ಥಿತಿ ಬಾರದಂತೆ ನೋಡಿಕೊಳ್ಳ ಬೇಕಾಗಿದೆ ಎಂದು ವ್ಯಕ್ತಪಡಿಸಿದ ಭೀತಿಯಂತೆ ದೇಶದ ಜನರಲ್ಲಿ ಈಗ ಅಂಥ ಭೀತಿಯೊಂದು ಕಾಡುತ್ತಿದೆ. ಅಂಥ ಪರಿಸ್ಥಿತಿಯ ಸಾಧ್ಯಾಸಾಧ್ಯತೆಗಳ ಕುರಿತು ರಾಜಕೀಯ ವಿಶ್ಲೇಷಣೆಯನ್ನು ಅನೇಕ ಪ್ರಬುದ್ಧ ಪತ್ರಿಕಾ ಅಂಕಣಕಾರರು ಮಾಡುತ್ತಿದ್ದಾರೆ. ಇತ್ತೀಚೆಗೆ ಆಹಾರ ಸೇವನೆಯ ಸ್ವಾತಂತ್ರ್ಯದ ಅಪಹರಣದ ಸಂದರ್ಭದಲ್ಲಿ ಸಂಭವಿಸಿದ ಅಮಾನುಷ ಕೊಲೆ ಮತ್ತು ಕೆಲ ರಾಜ್ಯ ಸರ್ಕಾರಗಳ ನಿಷೇಧಾಜ್ಞೆಗಳು ೬೪ ವರ್ಷಗಳ ಸ್ವಾತಂತ್ರ್ಯದ ನಂತರ ದೇಶದಲ್ಲಿ ಧರ್ಮ ಸೌಹಾರ್ದತೆ ಕುದುರುತ್ತಿರುವ ಗಳಿಗೆಯಲ್ಲಿಯೇ ದಾದ್ರಿ ಎಂಬಲ್ಲಿ ದುರ್ಘಟನೆ ನಡೆದದ್ದು ಸಂವಿಧಾನದ ಆಶಯಗಳಿಗೆ ಬಲವಾದ ಏಟುಕೊಟ್ಟಿದೆ. ಈ ದುರ್ಘಟನೆಯನ್ನು ಪ್ರಧಾನಿಯವರು ಈವರೆಗೂ ಪ್ರಬಲವಾಗಿ ಖಂಡಿಸಿಲ್ಲ. ಇಂಥ ಘಟನೆಗಳ ವಿಷಯದ ಜವಾಬ್ದಾರಿ ರಾಜ್ಯ ಸರ್ಕಾರಗಳದೆಂದು ಹೇಳಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದ್ದಾರೆ. ಬೇರೆ ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳ ಮೇಲೆ ಪ್ರಭಾವಬೀರಿ ತನ್ನ ಅನುಕೂಲಕ್ಕೆ ತಕ್ಕಂತೆ ಅವುಗಳನ್ನು ಬಗ್ಗಿಸುವ ಕೇಂದ್ರ ಸರ್ಕಾರ ದಾದ್ರಿ ವಿಷಯದಲ್ಲಿ ಮಾತ್ರ ಮೆದು ಧೋರಣೆಯನ್ನು ತಳೆದದ್ದನ್ನು ಯಾರೂ ಒಪ್ಪುವಂಥ ಮಾತಲ್ಲ. ಕಳೆದ ಇಪ್ಪತ್ತೆರಡು ವರ್ಷಗಳಿಂದ ಜಾರಿಯಲ್ಲಿದ್ದ ನ್ಯಾಯಾಧೀಶರ ನೇಮಕರಣದ ವ್ಯವಸ್ಥೆಯನ್ನು ಬದಲಾಯಿಸಲು ಹೊರಟಿದ್ದು ಕೂಡ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಕೇಂದ್ರ ಸರ್ಕಾರ ಹೊಂದಿರುವ ಡೋಲಾಯಮಾನ ಮನೋಸ್ಥಿತಿಯನ್ನು ತೋರಿಸುತ್ತದೆ.

'ಭಾರತದಲ್ಲಿ ತಯಾರಿಸಿ'(Make In India) ಎಂಬ ಹೆಸರಿನಲ್ಲಿ ಕೇಂದ್ರ ಸರ್ಕಾರ

ಭಾರತವನ್ನು ಬಲಿಷ್ಠ ಕೈಗಾರಿಕಾ ದೇಶವನ್ನಾಗಿ ಮಾಡಲು ಹೊರಟಿದೆ. ದೇಶದ ಕೈಗಾರಿಕೀಕರಣಕ್ಕಾಗಿ ಅಗತ್ಯವಿರುವ ಸಹಸ್ರ ಸಹಸ್ರ ಕೋಟಿ ಹಣವನ್ನು ಭಾರತದಲ್ಲಿ ತಯಾರಿಸಿ ಆಂದೋಲನದ ಮೂಲಕ ಜಗತ್ತಿನ ಶ್ರೀಮಂತ ರಾಷ್ಟ್ರಗಳಲ್ಲಿಯ ಬಹುರಾಷ್ಟ್ರೀಯ ಔದ್ಯೋಗಿಕ ಕಂಪನಿಗಳನ್ನು ಆಹ್ವಾನಿಸುತ್ತಿದೆ. ಕೇಂದ್ರ ಸರ್ಕಾರದ ಆಹ್ವಾನದ ಮೇರೆಗೆ ಈಗಾಗಲೇ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಬಂದಿವೆ. ಮತ್ತು ತಮ್ಮ ವಹಿವಾಟನ್ನು ಪ್ರಾರಂಭಿಸಿವೆ. ಹೊರದೇಶಗಳಿಂದ ಬಂದ ಕೈಗಾರಿಕಾ ಕಂಪನಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವುಗಳಿಗೆ ಅಗತ್ಯವಾದ ಭೂಮಿ, ನೀರು, ವಿದ್ಯುಚ್ಛಕ್ತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳನ್ನು ಕಡಿಮೆ ರಿಯಾಯಿತಿಯಲ್ಲಿ ಒದಗಿಸಿಕೊಡುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳು ಪ್ರಾರಂಭಿಸುವ ವಾಣಿಜ್ಯೋದ್ಯಮ ಮತ್ತು ಕೈಗಾರಿಕೆಗಳಿಂದ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆಂದು ನಂಬಲಾಗಿದೆ. ತನ್ಮೂಲಕ ನಿರುದ್ಯೋಗ ಸಮಸ್ಯೆ ಕಡಿಮೆಯಾಗುವುದೆಂದು ಭಾವಿಸಲಾಗಿದೆ. ಆದರೆ ಇಂದು ಕೇಂದ್ರ ಸರ್ಕಾರ ಹಾಕಿಕೊಂಡಿರುವ "ಭಾರತದಲ್ಲಿ ತಯಾರಿಸಿ" ಆಂದೋಲನದಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುವಂತೆ ಕಾಣುತ್ತಿಲ್ಲ. ಏಕೆಂದರೆ ಅಲ್ಲಿ ಸೇವಾ ಪ್ರಧಾನವಾದ ಉದ್ಯೋಗಾವಕಾಶಗಳಿಗೆ ಪ್ರಾಧಾನ್ಯತೆ ಇದೆ. ಆದರೆ ನಿಜವಾದ ಉದ್ಯೋಗದ ಸೃಷ್ಟಿಯಾಗುವುದು ಉತ್ಪಾದನೆಯ ಕ್ಷೇತ್ರದಲ್ಲಿ. ಈ ಕ್ಷೇತ್ರಕ್ಕೆ ಅಂಥ ಮಹತ್ವವನ್ನು ಕೊಟ್ಟಿಲ್ಲದೆ ಇರುವ ಕಾರಣಕ್ಕಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ದೇಶದಲ್ಲಿರುವ ಸುಮಾರು ೯೫೬ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ೪೪.೦ದಶಲಕ್ಷ ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ. ಇವರಲ್ಲಿ ಕೇವಲ ೨೦ದಶಲಕ್ಷ ಯುವಕರಿಗೆ ಮಾತ್ರ ಸೂಕ್ತ ಉದ್ಯೋಗಸಿಗುವ ಸಾಧ್ಯತೆಯಿದೆ. ಅಲ್ಲದೆ ಪ್ರತಿವರ್ಷ ೨.೨೩%ರಷ್ಟು ಯುವಕರು ಉದ್ಯೋಗ ಹುಡುಕುತ್ತಿದ್ದಾರೆ. ಈ ಕಾರಣದಿಂದಾಗಿ ಭಾರತದಲ್ಲಿ ನಿರ್ಮಿಸಿ ಕರೆಯ ಮೇರೆಗೆ ಭಾರತಕ್ಕೆ ಬರುತ್ತಿರುವ ಬಹುರಾಷ್ಟ್ರೀಯ ವಿದೇಶೀ ಕಂಪನಿಗಳಿಂದ ಉದ್ಯೋಗ ಸೃಷ್ಟಿಯಾಗುವುದೆಂಬ ವಿಚಾರ ಭ್ರಮೆಯಿಂದ ಕೂಡಿದುದಾಗಿದೆ. ಕೃಷಿ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆ ವೇಷ ಮರೆಸಿಕೊಂಡು ಇದ್ದೇ ಇರುತ್ತದೆ. ಬಹುರಾಷ್ಟ್ರೀಯ ಕಂಪನಿಗಳು ಸೃಷ್ಟಿಸುವ ಉದ್ಯೋಗಗಳು ಕೇಂದ್ರೀಕೃತವಾಗಿರುತ್ತವೆ. ಭಾರತ ದೇಶದ ಒಟ್ಟಾರೆ ನಿರುದ್ಯೋಗ ಸಮಸ್ಯೆಗೆ ವಿಕೇಂದ್ರೀಕೃತ ಉದ್ಯೋಗಗಳೇ ಅತ್ಯುತ್ತಮ ಪರಿಹಾರವಾಗಿದೆ. ಆದರೆ "ಭಾರತದಲ್ಲಿ ತಯಾರಿಸಿ" ಅಭಿಯಾನದಿಂದ ಆಗುತ್ತಿರುವ ನಕಾರಾತ್ಮಕ ಪರಿಣಾಮಗಳ ಬಗ್ಗೆ ಸರ್ಕಾರ ತಲೆಕೆಡಿಸಿಕೊಂಡಿಲ್ಲ. ದೇಶದ ಪ್ರಾಕೃತಿಕ ಸಂಪತ್ತು ವಿನಾಶವಾಗುತ್ತಿದೆ; ಗ್ರಾಮಗಳ ರೈತ ಯುವಕರು ನಗರಗಳಿಗೆ ವಲಸೆಹೋಗುತ್ತಿದ್ದಾರೆ. ನಗರಗಳ ಸಮಸ್ಯೆಯೂ ಉಲ್ಬಣಗೊಳ್ಳುತ್ತಿದೆ. ನಿರುದ್ಯೋಗದ ಸಮಸ್ಯೆ ಕಡಿಮೆಯಾಗಿಲ್ಲ. ಉತ್ತರ ಪ್ರದೇಶ ವಿಧಾನ ಸಭೆಯಲ್ಲಿ ಖಾಲಿ ಇದ್ದ ೩೬೮ ಜವಾನರ ಕೆಲಸಕ್ಕೆ ೨.೩ದಶಲಕ್ಷ ಜನರು ಅರ್ಜಿ ಹಾಕಿದ್ದರೆಂಬ ಸುದ್ದಿ ನಿರುದ್ಯೋಗ ಸಮಸ್ಯೆಯ ಉಗ್ರ ರೂಪವನ್ನು ತೋರಿಸುತ್ತದೆ. ಕೈಗಾರಿಕೀಕರಣ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಹಣದ ಹೊಳೆ ಹರಿಯುತ್ತಿದೆಯೇ ವಿನಃ ಬಹು ಸಂಖ್ಯಾತ ಜನರ ಜೀವನ ಮಟ್ಟದಲ್ಲಿ ಏರಿಕೆ ಆಗಿಲ್ಲ. ಭಾರತದಲ್ಲಿ ತಯಾರಿಸಿ ಅಭಿಯಾನದ ಮೂಲಕ ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆಇಡಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ಆಗಮನದಿಂದ ದೇಶಕ್ಕೆ ಕಾಲುಭಾಗದಷ್ಟು ಪ್ರಯೋಜನವಾದರೆ ಮುಕ್ಕಾಲು ಭಾಗದಷ್ಟು ಪ್ರಯೋಜನ ಆ ಕಂನಿಗಳಿಗೇ ಆಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ ದೇಶ

ಪೂರ್ಣವಾಗಿ ಪಾಶ್ಚಾತ್ಯೀಕರಣಗೊಂಡು ತನ್ನ ಅಸ್ಮಿತೆಯನ್ನು ಕಳೆದುಕೊಳ್ಳುತ್ತದೆ. ನೂರು ವರ್ಷಗಳ ಹಿಂದೆ ಗಾಂಧೀಜಿಯವರು ಹಿಂದ್ ಸ್ವರಾಜ್ಯದಲ್ಲಿ ಯಾವ ಯಾವ ವಿಷಯಗಳನ್ನು ಖಂಡಿಸಿ ಬರೆದಿದ್ದರೊ ಮತ್ತು ಯಾವ ವಿಷಯಗಳಿಂದ ಭಾರತ ತನ್ನನ್ನು ರಕ್ಷಿಸಿಕೊಳ್ಳಬೇಕೆಂದು ಬಯಸಿದ್ದರೊ ಅವೇ ಎಲ್ಲ ವಿಷಯಗಳನ್ನು ಇಂದಿನ ಸರ್ಕಾರ ಅನುಷ್ಠಾನಕ್ಕೆ ತರುತ್ತಿದೆ.

ಆದ್ದರಿಂದ ಈಗ ಭಾರತೀಯರ ಮುಂದೆ ಎರಡು ಸಿದ್ಧಾಂತಗಳು ಇವೆ. ಒಂದನೆಯದು ಪಶ್ಚಿಮ ದೇಶಗಳ ಮಾದರಿಯ ಅಭಿವೃದ್ಧಿಯ ಸಂಕೇತವಾಗಿ ನರೇಂದ್ರ ಮೋದಿಯವರಿದ್ದಾರೆ. ಭಾರತದ ಸಂಸ್ಕೃತಿ, ಭೂ ಗುಣಧರ್ಮ, ಹವಾಮಾನ, ಜನಸಂಖ್ಯೆ, ಪ್ರಾಕೃತಿಕ ಸಂಪತ್ತು ಮುಂತಾದವುಗಳನ್ನು ಗಮದಲ್ಲಿರಿಸಕೊಂಡು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ದೇಶದ ಅಭಿವೃದ್ಧಿ ಆಗಬೇಕೆಂದು ಬಯಸಿದ್ದ ಗಾಂಧೀ ಎರಡನೇ ಮಾದರಿಯ ಸಂಕೇತವಾಗಿ ಇದ್ದಾರೆ. ಮೋದಿಯವರ ಸಿದ್ಧಾಂತ ಹಿಂಸೆ, ಅಸತ್ಯ, ಅಸಮಾನತೆ, ಪ್ರಕೃತಿ ಸಂಪತ್ತಿನ ವಿನಾಶ, ಸಾಮಾಜಿಕ ಕ್ಲೇಶ ಇತ್ಯಾದಿಗಳ ಆಧಾರದ ಮೇಲೆ ರಾಷ್ಟ್ರ ನಿರ್ಮಾಣವಾಗಬೇಕೆಂದು ಪ್ರತಿಪಾದಿಸಿದರೆ, ಗಾಂಧಿಯವರ ಸಿದ್ಧಾಂತ ಅಹಿಂಸೆ, ಸತ್ಯ, ಶಾಂತಿ ಮತ್ತು ಸರ್ವೋದಯದ ಅಭಿವೃದ್ಧಿಯ ಮಾದರಿಯನ್ನು ಪ್ರತಿಪಾದಿಸುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಅತಿಯಾದ ಬೆಳವಣಿಗೆಯಿಂದಾಗಿ ಜಗತ್ತಿನಾದ್ಯಂತ ಜನರ ಬದುಕು ಅಸ್ಥಿರವಾಗಿದೆ. ತೀವ್ರತಮವಾಗುತ್ತಿರುವ ಅಸ್ಥಿರ ಬದುಕಿನ ಬಗ್ಗೆ ಚಿಂತಾಕ್ರಾಂತರಾಗಿರುವ ಮಾನವ ಹಿತಚಿಂತನೆಯ ಚಿಂತಕರು ಸುಸ್ಥಿರ ಬದುಕಿನ ಅಗತ್ಯದ ಬಗ್ಗೆ ಪ್ರಸ್ತಾಪಮಾಡುತ್ತಿದ್ದಾರೆ. ಸುಸ್ಥಿರ ಬದುಕಿನ ವಿಷಯ ಜಾಗತಿಕ ಮಟ್ಟದ ಜ್ವಲಂತ ಸಮಸ್ಯೆಯಾಗಿದೆ. ಬಂಡವಾಳವಾದಕ್ಕೆ ವಿದಾಯ ಹೇಳಿ ಕಲ್ಯಾಣಕಾರಿ ಗಣರಾಜ್ಯ ಸ್ಥಾಪಿಸಬೇಕೆಂಬ ವಿಚಾರ ಮುನ್ನೆಲೆಗೆ ಬರುತ್ತಿದೆ. ಮುಂದಿನ ಹದಿನೈದು ವರ್ಷಗಳಲ್ಲಿ ಯಾವ ಪ್ರಕಾರದ ಅಭಿವೃದ್ಧಿ ಇರಬೇಕೆಂಬ ವಿಷಯ ಚರ್ಚೆಗೆ ಬರುತ್ತಿದೆ. ಅದರ ಉದ್ದೇಶ ಸುಸ್ಥಿರ ಜೀವನ ಪದ್ಧತಿಯ ಗುರಿಯೇ ಆಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಹಾಗೆ ವಿಶ್ವಸಂಸ್ಥೆಯ ೧೯೩ ಸದಸ್ಯ ರಾಷ್ಟ್ರಗಳು ದೀರ್ಘವಾಗಿ ಚರ್ಚೆ ನಡೆಸಿ ೧೭ ಪ್ರಕಾರದ ಗುರಿಗಳನ್ನು ಮತ್ತು ೧೬೯ ಪ್ರಕಾರದ ಸಾಧಿತವಾಗಬೇಕಾದ ಅಂಶಗಳನ್ನು ಗೊತ್ತುಮಾಡಿದೆ. ಇವುಗಳೆಲ್ಲವು ಅತಿಯಾಗಿರುವ ಬಡತನ ಮತ್ತು ಹಸಿವನ್ನು ಹೋಗಲಾಡಿಸುವ ಬಗ್ಗೆ, ಆರ್ಥಿಕ ಬೆಳವಣಿಗೆಯ ಮೂಲಕ ಏಳ್ಗೆಯನ್ನು ಸಾಧಿಸುವ ಬಗ್ಗೆ, ಆರೋಗ್ಯ ಮತ್ತು ಶಿಕ್ಷಣವನ್ನು ಸುಧಾರಿಸುವ ಬಗ್ಗೆ ಹಾಗೂ ಈ ಭೂಮಿಯನ್ನು ಸಂರಕ್ಷಿಸುವ ಬಗ್ಗೆ ಇವೆ. ವಿಶ್ವಸಂಸ್ಥೆಯ ಇತಿಹಾಸದಲ್ಲಿಯೇ ಇವು ಅತ್ಯಂತ ಸಮಗ್ರ ಪ್ರಕ್ರಿಯೆಗಳೆಂದು ವಿಶ್ವಸಂಸ್ಥೆಯ ಕಾರ್ಯದರ್ಶಿ ಬಾನ್ ಕಿ ಮೂನ್ ಹೇಳಿದ್ದಾರೆ.

ಕಾರ್ಲ್‌ಮಾರ್ಕ್ಸನ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ, ಥಾಮಸ್ ಪೈನನ ರೈಟ್ಸ್ ಆಫ್ ಮ್ಯಾನ್, ಸ್ಮಿತ್‌ನ ರಾಷ್ಟ್ರಗಳ ಐಶ್ವರ್ಯ ಈ ಮುಂತಾದ ಸಾಹಿತ್ಯ ಮುಕ್ತಾಯಗೊಂಡ ದಾಖಲೆಗಳಂತೆ ಓದಿಸಿಕೊಂಡು ಹೋಗುತ್ತವೆ. ಆದರೆ ಗಾಂಧಿಯವರ ಹಿಂದ್ ಸ್ವರಾಜ್ ಸತತವಾಗಿ ಪುನಃ ಪುನಃ ಬರೆಯಲ್ಪಡುವಂಥ ದಾಖಲೆಯಾಗಿ ಓದಿಸಿಕೊಂಡು ಹೋಗುತ್ತದೆ ಎಂದು ಅಂಕಣಕಾರ ಶಿವ್ ವಿಶ್ವನಾಥನ್ ಹೇಳಿದ ಮಾತು ಸತ್ಯಕ್ಕೆ ಹತ್ತಿರವಾಗಿದೆ. ಸೈದ್ಧಾಂತಿಕವಾಗಿ ಮೋದಿ ವಿರುದ್ಧ ಗಾಂಧಿಯನ್ನು ನಿಲ್ಲಿಸಬೇಕಾದ ಕಾಲ ಬಂದಿದೆ. ಜಗತ್ತಿಗೇ ಜಯವಾಗಲಿ ಎಂಬ ಘೋಷಣೆಯಲ್ಲಿ ನಂಬಿಕೆ ಇಡುವವರೆಲ್ಲ ಈ ಎರಡು ವೈರುಧ್ಯದ ಸಿದ್ಧಾಂತಗಳಲ್ಲಿ ಗಾಂಧೀ ಸಿದ್ಧಾಂತವನ್ನು ಎತ್ತಿಹಿಡಿಯಬೇಕಿದೆ.

ಸ್ತ್ರೀ-ಶಕ್ತಿ ಎಲ್ಲೆಡೆಗೂ ಹರಡಲಿ

– ವಿನೋಬ

(ಮಹಿಳೆಯರ ಮುಂದೆ ವಿಶಾಲಕಾರ್ಯವಿದೆ. ಮೂರು ಶಕ್ತಿಗಳ ಆಧಾರದ ಮೇಲೆ ಸ್ತ್ರೀ – ಶಕ್ತಿಯನ್ನು ಹರಡಬೇಕಿದೆ – ಸಂ)

ಸ್ತ್ರೀ-ಶಕ್ತಿಗಾಗಿ ಭಾರತದ ಎಲ್ಲ ಪ್ರಾಂತಗಳಲ್ಲಿ ಯಾತ್ರೆಗಳು ನಡೆದವು. ಅದರಿಂದಾಗಿ ಬಹಳ ಬಲ ಬಂದಿತು ಮತ್ತು ಒಳ್ಳೆಯ ಅನುಭವವೂ ಬಂದಿತು. ಅಪೇಕ್ಷೆಗಿಂತ ಹೆಚ್ಚು ಕೆಲಸವಾಯಿತು. ಸಾಮಾನ್ಯತಃ ಅಪೇಕ್ಷೆಗಿಂತ ಕಡಿಮೆ ಕೆಲಸವಾಗುತ್ತದೆ. ಈ ಸಂದರ್ಭದಲ್ಲಿ ಬೇರೆಯೇ ಆಯಿತು. ಅಪೇಕ್ಷೆಗಿಂತ ಹೆಚ್ಚು ಕೆಲಸವಾಯಿತು. ಸ್ತ್ರೀಯರಿಗೆ ಮತ್ತು ಪುರುಷರಿಗೆ ಆದ ದರ್ಶನವೇನೆಂದರೆ ಭಾರತದ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಅತ್ಯಂತ ಆದರವಿದೆ.

ಋಗ್ವೇದದಲ್ಲಿ ಅನೇಕ ಸ್ತ್ರೀ-ಋಷಿಗಳೂ ಇದ್ದಾರೆ. ಆ ಸ್ತ್ರೀ-ಋಷಿಗಳಲ್ಲಿ ವಾಗಾಭೃಣಿ ಎಲ್ಲರಿಗಿಂತಲೂ ಶ್ರೇಷ್ಠ. ವಾಕ್ ಅಂದರೆ ವಾಣಿ. ಅವಳು ಅಭೃಣಿಯೆಂಬ ಋಷಿಯ ಕನ್ಯೆ. ಆದ್ದರಿಂದ ಅವಳಿಗೆ ವಾಗಾಭೃಣಿ ಎಂದು ಕರೆಯುತ್ತಿದ್ದರು. ಅವಳು ಬ್ರಹ್ಮಚಾರಿಣಿಯಾಗಿದ್ದಳು. ಅವಳು ಬರೆದ ಒಂದು ಸುಂದರವಾದ ಸೂಕ್ತವಿದೆ. ಆ ಸೂಕ್ತದಲ್ಲಿ ಅವಳು ಅಹಂ ರಾಷ್ಟ್ರೀ ಸಂಗಮನಿ ವಸುನಾಮ್. ವಸು ಅಂದರೆ ಒಳ್ಳೆಯತನ. ಜಗತ್ತಿನಲ್ಲಿ ಎಷ್ಟೊಂದು ಒಳ್ಳೆಯತನಗಳಿವೆಯೊ ಅವೆಲ್ಲವುಗಳ ಸಂಗಮ ಮಾಡುವ ನಾನು ರಾಷ್ಟ್ರದೇವತೆ. ರುದ್ರನಿಗೆ ನಾನು ಹಸುಕೊಟ್ಟಿದ್ದೇನೆ. ಇಡೀ ವಿಶ್ವವೇ ನಾನು. ಇಂಥ ಭಾವನೆಯಿಂದ ಅವಳು ಮಾತನಾಡುತ್ತಾಳೆ. ಇಡೀ ವಿಶ್ವ ನನ್ನಲ್ಲಿ ಸನ್ನಿಹಿತವಾಗಿದೆ. ನಾನು ವಿಶ್ವ ವ್ಯಾಪಕಳು. ಒಂದು ದೇಹದಲ್ಲಿ ಸೀಮಿತಳಲ್ಲ. ಎಲ್ಲ ದೇಹಗಳಲ್ಲಿ ನಾನೇ ಇದ್ದೇನೆ. ಇತ್ಯಾದಿ ಅದ್ವೈತ ವಿಚಾರಗಳ ದರ್ಶನ ವಾಗ್‌ಭೃಣಿಯ ಈ ಸೂಕ್ತದಲ್ಲಿ ಆಗುತ್ತದೆ. ತಾತ್ಪರ್ಯವಿಷ್ಟೆ : ಸ್ತ್ರೀ-ಶಕ್ತಿಗಾಗಿ ಭಾರತಮಾತ ಅನುಕೂಲವಿದ್ದಾಳೆ. ನಾವು ಭಾರತಕ್ಕೆ ಮಾತೆ ಎನ್ನುತ್ತೇವೆ. ಇಂಗ್ಲೀಷಿನಲ್ಲಿ ಫಾದರ್‌ಲ್ಯಾಂಡ್(ಪಿತೃಭೂಮಿ) ಎಂದೆನ್ನುತ್ತಾರೆ, ನಾವು ಮಾತೃಭೂಮಿ ಎಂದೆನ್ನುತ್ತೇವೆ. ಎಲ್ಲಿಯವರೆಗೆ ಹಿಂಸಯಶಕ್ತಿ ಮುಖ್ಯವಾಗಿರುತ್ತದೊ. ಎಲ್ಲಿಯವರೆಗೆ ದೇಶವನ್ನು ರಕ್ಷಿಸುವುದಕ್ಕಾಗಿ ಹಿಂಸೆಯೇ ಅಚಿತಿಮ ಶಸ್ತ್ರವಾಗಿರುತ್ತದೊ ಅಲ್ಲಿಯವರೆಗೆ ನೀವು ಏನೇ ಮಾಡಿದರೂ ಪುರುಷರದೇ ಮಹತ್ವ ಇರುವುದೆಂಬ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ. ಆದರೆ ಶಸ್ತ್ರ-ಯುಗ ನಿಧಾನವಾಗಿ ಸಮಾಪ್ತಗೊಳ್ಳುತ್ತಿದೆ. ಬೆಲೆಸ್ಟಿಕ್

ವೆಪನ್ಸ್(ಪ್ರಕ್ಷೇಪಣಾಸ್ತ್ರ) ಬಂದ ಮೇಲೆ ಇಡೀ ಮಾನವತೆ ಹತ್ತಿರ ಬರುತ್ತಿದೆ. ಮುಂದಿನ ಯುಗ ಅಹಿಂಸೆಯದು. ಅಹಿಂಸೆಯ ಯುಗದಲ್ಲಿ ನಿಸ್ಸಂದೇಹವಾಗಿ ಸ್ತ್ರೀ-ಶಕ್ತಿ ಪ್ರಧಾನವಾಗಿರುವುದು.

೧೯೭೫ರಲ್ಲಿ ಇಡೀ ಜಗತ್ತಿನ ತುಂಬಾ ಸ್ತ್ರೀ-ಶಕ್ತಿಯ ವರ್ಷವೆಂದು ತಿಳಿಯಲ್ಪಟ್ಟಿದೆ. ಆದ್ದರಿಂದ ಇಲ್ಲಿರುವ ಸಹೋದರಿಯರು ಜಗತ್ತಿನೊಂದಿಗೆ ಕೂಡ ಸಂಪರ್ಕವನ್ನು ಇಟ್ಟುಕೊಳ್ಳಬೇಕಾಗುವುದು. ನಾವು ನಮ್ಮ ಅಕ್ಕ-ಪಕ್ಕ ನೋಡೋಣ! ಇಡೀ ಭಾರತದ ವ್ಯವಹಾರವನ್ನು ಇಂದಿರಾಗಾಂಧಿ ನೋಡುತ್ತಿದ್ದಾರೆ. ಶ್ರೀಲಂಕಾದಲ್ಲಿ ಶ್ರೀಮತಿ.ಭಂಡಾರನಾಯಕರಿದ್ದಾರೆ. ಅತ್ತ ಇಸ್ರೇಲಿನಲ್ಲಿ ಗೋಲ್ಡಾಮೇಯರ್ ಇದ್ದರು. ಅವರು ಈಗ ಪ್ರಧಾನಮಂತ್ರಿ ಇಲ್ಲ. ಆದರೂ ಕೂಡ ಇಸ್ರೇಲ್ ದೇಶದ ಜೀವನದಲ್ಲಿ ಅವರ ಸ್ಥಾನ ಖಾಯಂ ಆಗಿದೆ. ಜಗತ್ತಿನಲ್ಲಿ ಇಂಥ ಸಹೋದರಿಯರೊಂದಿಗೆ ನೀವು ಸಂಪರ್ಕಮಾಡಬೇಕಾಗುವುದು. ಈಗ ವಿಶ್ವ ಬಹಳ ಹತ್ತಿರ ಬಂದಿದೆ, ಚಿಕ್ಕದಾಗಿದೆ. ವಸುಧೈವ ಕುಟುಂಬಕಮ್ ಎಂದು ಸಂಸ್ಕೃತದಲ್ಲಿ ಹೇಳಿದೆ. ಅಂದರೆ ಚಿಕ್ಕದಾದ ಕುಟುಂಬ. 'ಕ' ಪ್ರತ್ಯಯದ ಅರ್ಥ ಚಿಕ್ಕದು ಎಂದಾಗುತ್ತದೆ. ಉದಾಹರಣೆಗೆ ಬಾಲ ಮತ್ತು ಬಾಲಕ. ಈ ವಸುಧೆ ಅಂದರೆ ಪೃಥ್ವಿ ನಮ್ಮ ಚಿಕ್ಕದಾದ ಕುಟುಂಬ. ಪರಮಾತ್ಮನ ಸೃಷ್ಟಿ ಅನಂತ. ಸೃಷ್ಟಿಯಲಿ ಎಷ್ಟೋ ಲಕ್ಷ ಗ್ರಹಗಳಿವೆ. ಅವುಗಳಲ್ಲಿ ಒಂದು ಪೃಥ್ವಿ ಆದ್ದರಿಂದ ಅದು ನಮ್ಮ ಚಿಕ್ಕದಾದ ಕುಟುಂಬ. ನಾವು ವಿಶ್ವವ್ಯಾಪಕ, ನಮ್ಮ ಕುಟುಂಬ ದೂರದೂರದವರೆಗೆ ಹರಡಿದೆ. ಚಂದ್ರ, ಮಂಗಳ ಎಲ್ಲವೂ ನಮ್ಮ ಕುಟುಂಬದಲ್ಲಿ ಬರುತ್ತವೆ. ಪೃಥ್ವಿ ಚಿಕ್ಕದಾದ ಕುಟುಂಬ. ಇಷ್ಟು ವ್ಯಾಪಕ ದೃಷ್ಟಿ ನಮ್ಮ ಪೂರ್ವಜರದಾಗಿತ್ತು. ವಿಶ್ವಮಾನುಷಃ ಎಂಬ ಶಬ್ದ ವೇದದಲ್ಲಿ ಬಂದಿದೆ. ನಾನು ವಿಶ್ವಮಾನವನೆಂದು ಋಷಿ ಹೇಳುತ್ತಿದ್ದಾನೆ. ವಿಜ್ಞಾನದ ಈ ಯುಗದಲ್ಲಿ ಇಡೀ ವಿಶ್ವವನ್ನು ಒಂದು ಕುಟುಂಬವೆಂದು ತಿಳಿದು ನಡೆಯಬೇಕಾಗುವುದು. ಆದ್ದರಿಂದ ನಾನು ಒಂದು ಕಡೆ 'ಜೈ ಗ್ರಾಮದಾನ್' ಅನ್ನುತ್ತೇನೆ. ಇನ್ನೊಂದೆಡೆ 'ಜೈ ಜಗತ್' ಅನ್ನುತ್ತೇನೆ. 'ಜೈ ಭಾರತ್', 'ಜೈ ಹಿಂದ್' ಇವು ಹಳೆಯದಾದವು. ವಿಜ್ಞಾನದ ಕಾರಣದಿಂದ ಇಡೀ ವಿಶ್ವ ಒಂದಾಗಬೇಕು. ವಿಶ್ವದ ಜೊತೆಗೆ ಸಂಬಂಧವನ್ನಿಟ್ಟುಕೊಳ್ಳಬೇಕಾಗುವುದು.

ಬಹಳೇ ವಿಶಾಲಕಾರ್ಯವಿದೆ. ಆ ವಿಶಾಲತೆಯ ಬಗ್ಗೆ ಆಲೋಚಿಸಿದಾಗ ಭಯವಾಗುತ್ತದೆ. ಆದರೆ ನಾವು ಯಾವುದನ್ನು ಧರ್ಮ ಎಂದು ಹೇಳುತ್ತೇವೊ ಮತ್ತು ರಾಜನೀತಿಯೆಂದು ಹೇಳುತ್ತೇವೊ ಅವು ಈಗ ಅಪ್ರಸ್ತುತವಾಗಿವೆ. ಅವು ಇನ್ನು ನಡೆಯಲಾರವು. ಇದನ್ನು ಅರಿತಲ್ಲಿ ಭಯವಾಗುವುದಿಲ್ಲ. ಈ ಯುಗದಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ನಡೆಯುವವು. ಪರಂಪರಾಗತ ಧರ್ಮ ಪಂಥದ ಸ್ಥಳವನ್ನು ಆಧ್ಯಾತ್ಮ ಆವರಿಸಿಕೊಳ್ಳುವುದು ಮತ್ತು ರಾಜನೀತಿಯ ಸ್ಥಳವನ್ನು ವಿಜ್ಞಾನ ಆಕ್ರಮಿಸುವುದು.

ನನ್ನ ಈ ವಿಚಾರ ಜವಹರಲಾಲ್ ನೆಹರೂರವರಿಗೆ ಒಮ್ಮೆಲೆ ಒಪ್ಪಿಗೆ ಆಗಿತ್ತು. "ನಾನು ರಾಜನೀತಿಯಲ್ಲಿ ಇದ್ದರೂ ವಿನೋಬಾರ ಈ ವಿಚಾರ ನನ್ನ ಮನಸ್ಸಿಗೆ ಹಿಡಿಯಿತು" ಎಂದು ಅವರು ಹೇಳಿದರು. ರಾಜನೀತಿ ಮತ್ತು ಚಿಕ್ಕ ಚಿಕ್ಕ ಧರ್ಮ ಪಂಥಗಳೆಲ್ಲ ಹಿಂದುಳಿದಿವೆ. ಇನ್ನು ಮೇಲೆ ವಿಜ್ಞಾನ – ಶಕ್ತಿ ಮತ್ತು ಅಧ್ಯಾತ್ಮ – ಶಕ್ತಿ ಈ ಎರಡೇ ಶಕ್ತಿಗಳು ಚಲಾವಣೆಗೆ ಬರುವವು.

ವಿಜ್ಞಾನ ಮತ್ತು ಆಧ್ಯಾತ್ಮದ ಸಂಬಂಧ ಯಾವ ರೀತಿ ಇರುವುದು? ಮೊಟಾರಿಗೆ ಎರಡು ಯಂತ್ರಗಳಿರುತ್ತವೆ. ಒಂದು ಗತಿ ಹೆಚ್ಚಿಸುವುದಕ್ಕಾಗಿ, ಎರಡನೆಯದು ದಿಕ್ಕು ತೋರಿಸುವಂಥಾದ್ದು. ಕೇವಲ ಗತಿ ಕೊಡುವ ಯಂತ್ರಮಾತ್ರವಿದ್ದು ದಿಕ್ಕು ತೋರಿಸುವ ಯಂತ್ರ ಇಲ್ಲದಿದ್ದರೆ ಏನಾಗುವುದು? ಮೋಟಾರ್ ವೇಗವಾಗಿ ಹೋಗುತ್ತಿದೆ ಎದುರಿಗಿನ ಸೇತುವೆ ಮುರಿದಿದೆ, ದಿಕ್ಕು ತೋರಿಸುವ ಯಂತ್ರ ಇಲ್ಲ, ಆಗ ಮೋಟಾರ್ ಗುಂಡಿಯಲ್ಲಿ ಬೀಳುವುದು! ಗತಿಕೊಡುವ ಯಂತ್ರ ವಿಜ್ಞಾನ; ಮಾರ್ಗದರ್ಶನ ಮಾಡುವ ಯಂತ್ರ ಆಧ್ಯಾತ್ಮ. ವಿಜ್ಞಾನ ಮತ್ತು ಆಧ್ಯಾತ್ಮದ ಸಂಬಂಧ ಈ ರೀತಿ ಇದೆ. ಈ ಎರಡು ಶಕ್ತಿಗಳೇ ಮುಂದಿನ ಯುಗದಲ್ಲಿ ಕೆಲಸಮಾಡುವವು.

ಈ ಎರಡು ಶಕ್ತಿಗಳಲ್ಲದೇ ಅವುಗಳ ಜೊತೆ ನಾನು ಇನ್ನೊಂದು ಶಕ್ತಿಯ ಹೆಸರನ್ನು ಜೋಡಿಸಿದ್ದೇನೆ–ವಿಶ್ವಾಸ! ಮಾನವರಲ್ಲಿ, ರಾಷ್ಟ್ರಗಳಲ್ಲಿ, ಪಂಥಗಳಲ್ಲಿ, ಧರ್ಮಗಳಲ್ಲಿ ಪರಸ್ಪರ ವಿಶ್ವಾಸ ಉಂಟಾದರೆ ಆಗ ಇಡೀ ಜಗತ್ತಿನಲ್ಲಿ ಏಕತೆ ಉಂಟಾಗುವುದು. ಅದಕ್ಕಾಗಿ ನಾನೊಂದು ಶ್ಲೋಕ ರಚಿಸಿದ್ದೇನೆ –

ವೇದಾಂತೋ ವಿಜ್ಞಾನಂ ವಿಶ್ವಾಸಶ್ಚೇತಿ ಶಕ್ತಯಃ ತಿಸ್ರಃ
ಯಾಸಾಮ್ ಸ್ಥೈರ್ಯೇ ನಿತ್ಯಂ ಶಾಂತಿ–ಸಮೃದ್ಧಿ ಭವಿಷ್ಯತೊ ಜಗತಿ

ವೇದಾಂತ, ವಿಜ್ಞಾನ, ವಿಶ್ವಾಸ ಮೂರು ಶಕ್ತಿಗಳು ಅವುಗಳ ನಿತ್ಯ ಸ್ಥೈರ್ಯದಿಂದ ಜಗತ್ತಿನಲ್ಲಿ ಶಾಂತಿ – ಸಮೃದ್ಧಿ ಇರುತ್ತದೆ.

ವಿಶ್ವಾಸದ ಶಕ್ತಿ ಎಂಥದು? ಯಾವ ರೀತಿ ಅಹಿಂಸೆಯದೊ ಆ ರೀತಿಯದು. ನಮ್ಮ ವಿರುದ್ಧ ಯಾರು ಹಿಂಸೆ ಮಾಡುತ್ತಾರೊ ಅವರನ್ನು ನಾವು ಅಹಿಂಸೆಯಿಂದ ಗೆಲ್ಲುತ್ತೇವೆ. ಅವನು ಒಂದು ಸೇರು ಹಿಂಸೆ ಮಾಡಿದರೆ ನಮ್ಮ ಅಹಿಂಸೆ ಎರಡು ಸೇರು ಇರುವುದು. ಆಗ ಹಿಂಸೆಯ ಮೇಲೆ ಅಹಿಂಸೆ ಜಯ ಸಾಧಿಸುವುದು. ಅದೇ ರೀತಿ ಅವಿಶ್ವಾಸವನ್ನು ವಿಶ್ವಾಸ ಜಯಿಸುವುದು. ಎದುರಾಳಿಯು ನಮ್ಮ ಬಗ್ಗೆ ಎಷ್ಟೊಂದು ಅವಿಶ್ವಾಸ ತಾಳಿರುವನೊ ಅಷ್ಟೇ ಪ್ರಮಾಣದಲ್ಲಿ ನಾವು ಅವನ ಮೇಲೆ ವಿಶ್ವಾಸ ಇಡುತ್ತಾ ಹೋಗುವೆವು. ಅವನು ನಮ್ಮನ್ನು ಕೊಲೆಮಾಡಬಯಸಿದರೆ ನಾವು ಅವನಿಗೆ "ನಿನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗುತ್ತೇವೆ. ಆಗ ನೀನು ಕೊಲೆಮಾಡಲು ದೂರ ಹೋಗುವ ಅವಶ್ಯಕತೆ ಇರುವುದಿಲ್ಲ" ಎಂದು ಹೇಳುತ್ತೇವೆ! ಅವಿಶ್ವಾಸ ಇಡುವವರ

ಮೇಲೆ ವಿಶೇಷವಾಗಿ ವಿಶ್ವಾಸ ಇಡಬೇಕಾಗುತ್ತದೆ. ತಾತ್ಪರ್ಯವಿಷ್ಟೆ, ಈ ಮೂರೂ ಶಕ್ತಿಗಳ ವಿಕಾಸವಾದಾಗ ಜಗತ್ತಿನಲ್ಲಿ ಶಾಂತಿ ಇರುವುದ, ಏಕತೆ ಉಂಟಾಗುವುದು.

ಎಲ್ಲ ಭಾರತೀಯ ವಿಚಾರವನ್ನು ನಾವು ಪಂಚಯಮ ಎನ್ನುತ್ತೇವೆ. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ ಇವು ಪಂಚಯಮ. ಇವು ಭಾರತೀಯ ಸಂಸ್ಕೃತಿಯ ಮುಖ್ಯ ಕಾಣಿಕೆ. ಪ್ರಾಚೀನ ಕಾಲದಲ್ಲಿ ಪಂಚಯಮಗಳ ಜೊತೆಗೆ ಪಂಚನಿಯಮಗಳನ್ನೂ ಕೂಡ ಅಂಗೀಕರಿಸಲಾಗಿತ್ತು. ಎರಡೂ ಸೇರಿ ಹತ್ತು ಆಗುತ್ತವೆ. ಯೇಸುವಿನ 'ಟೆನ್ ಕಮಾಡ್‌ಮೆಂಟ್ಸ್'(ಹತ್ತು ಆಜ್ಞೆಗಳು) ಇವು ಪ್ರಸಿದ್ಧ ಇವೆ. ಮನುಸೃತಿಯಲ್ಲಿ ದಶಕಂ ಧರ್ಮ ಲಕ್ಷಣಂ ಧರ್ಮದ ಹತ್ತು ಲಕ್ಷಣಗಳನ್ನು ಹೇಳಲಾಗಿದೆ. ನಂತರ ಗಾಂಧೀಜಿ ಇನ್ನೊಂದನ್ನು ಜೋಡಿಸಿ ಹನ್ನೊಂದು ವ್ರತಗಳನ್ನು ರಚಿಸಿದರು. ಅವುಗಳೊಂದಿಗೆ ಒಂದು ದೊಡ್ಡ ಮಾತನ್ನು ಬಾಪು ಜೋಡಿಸಿಬಿಟ್ಟರು – ನಮ್ರತೆ! ನಿಶ್ಚಯಪೂರ್ವಕವಾಗಿ ವ್ರತಗಳ ಪಾಲನೆಮಾಡಬೇಕು. ಹೇಗೆ? ನಮ್ರತೆಯಿಂದ. ವ್ರತಪಾಲನೆಯಲ್ಲಿ ನಮ್ರತೆಯಿರಬೇಕು. ನಮ್ರತೆಯನ್ನು ವ್ರತಗಳಲ್ಲಿ ಯಾಕೆ ಸೇರಿಸಲಿಲ್ಲ ಎಂದು ಯಾರೋ ಒಬ್ಬರು ಬಾಪುರವರನ್ನು ಕೇಳಿದರು? ಆಗ ಬಾಪು ಹೇಳಿದರು "ಒಂದು ವೇಳೆ ನಮ್ರತೆಯನ್ನು ವ್ರತವನ್ನಾಗಿ ಮಾಡಿದರೆ ಡೊಂಗಿ, ಸೋಗಿನ ಜನರು ಹೆಚ್ಚಾಗುವರು. ನಮ್ರತೆ ನಾಟಕವಾಗಲಾರದು. ಈ ಕಾರಣದಿಂದಾಗಿ ನಮ್ರತೆ ವ್ರತವಾಗಲಿಲ್ಲ. ನಮ್ರತಾಪೂರ್ವಕ ನಾವು ಈ ಎಲ್ಲ ವ್ರತಗಳ ಪಾಲನೆಮಾಡಬೇಕು. ಎರಡನೆಯವರಿಗೂ ಇದರ ದೀಕ್ಷೆಕೊಡಬೇಕು, ಯಥಾಶಕ್ತಿ, ಯಥಾಮತಿ.

ತುಕಾರಾಮ್ ಮಹಾರಾಜ್ ಹೇಳಿರುವಂತೆ ಯಾರು ಸ್ವತಃ ಮಾಡಿ ಸ್ವತಃ ತಿನ್ನುತ್ತಾರೊ ಅವರ ಪಾದವನ್ನು ತುಕಾರಾಮ್ ಮುಟ್ಟುತ್ತಾನೆ. ಮೊಟ್ಟಮೊದಲು ವ್ರತಗಳ ಪಾಲನೆಯನ್ನು ಸ್ವತಃ ಮಾಡಬೇಕು. ಇನ್ನು ಉಳಿದ ಹತ್ತನೇ ಭಾಗವನ್ನು ಜನರಿಗೆ ತಿಳಿಸಬೇಕು. ಇತ್ತೀಚೆಗೆ ಜನರು ಹೋಟೆಲ್ ಆರಂಭಿಸುತ್ತಾರೆ. ತಮಗಾಗಿ ಅಲ್ಲ ಬೇರೆಯವರು ತಿನ್ನುವುದಕ್ಕೆ! ಅದೇ ರೀತಿ ನಾವು ಕೂಡ ವ್ರತಗಳ ಪಾಲನೆಯ ಮಾತನ್ನು ಬೇರೆಯವರಿಗೆ ತಿಳಿಹೇಳುತ್ತೇವೆ. ಅವುಗಳ ಪಾಲನೆ ಸ್ವತಃ ಮಾಡಲು ಗಮನಕೊಡುವುದಿಲ್ಲ. ಆದ್ದರಿಂದ ಮೊದಲು ವ್ರತಗಳನ್ನು ಸ್ವತಃ ಪಾಲಿಸೋಣ. ಪರೋಪದೇಶೆ ಪಾಂಡಿತ್ಯಮ್ ಎರಡನೆಯವರಿಗೆ ಉಪದೇಶಮಾಡುವುದು ಸುಲಭ. ತಮ್ಮ ಮೇಲೆ ಅದನ್ನು ಜಾರಿಗೊಳಿಸುವುದು ಕಠಿಣವಾಗುತ್ತದೆ. ಆದ್ದರಿಂದ ಮೊಟ್ಟಮೊದಲು ತಮ್ಮ ಮೇಲೆ ಜಾರಿಮಾಡಿಕೊಳ್ಳಲಿ.

(ದಿನಾಂಕ : ೨೪.೦೨.೧೯೭೪ ರಂದು ಸ್ತ್ರೀ – ಶಕ್ತಿ ಜಾಗೃತಿ ಸಭೆಯಲ್ಲಿ ವಿನೋಬಾ ಮಾಡಿದ ಭಾಷಣ ಅನು.ಸುಕೌ)

ಮೈತ್ರಿ – ಸಾಭಾರ.

ಅಪಾಯದ ಅಂಚಿಗೆ ಸಾಗುತ್ತಿರುವ ಭಾರತದ ಪ್ರಜಾತಂತ್ರ

– ಜ.ಹೊ.ನಾರಾಯಣಸ್ವಾಮಿ

ವಿವಿಧ ರೀತಿಯ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವೆ ತನ್ನ ವಿಶಾಲವಾದ ಅರ್ಥದಲ್ಲಿ ಶ್ರೇಷ್ಠತಮವಾದುದು ಎಂದು ನಂಬಲಾಗಿದೆ. ಏಕೆಂದರೆ ನಿಸರ್ಗ ನಿಯತಿಯಾದ 'ಸ್ವಾತಂತ್ರ್ಯ'ಕ್ಕೆ ಅಲ್ಲಿ ಸ್ಥಾನವುಂಟು. ಸ್ವಾತಂತ್ರ್ಯವಿಲ್ಲದ ಸ್ವರ್ಗವೂ ನರಕ. ಆದ್ದರಿಂದ ಪ್ರಜೆಗಳಿಂದ ಆಯ್ಕೆಯಾಗುವ ಚುನಾಯಿತ ಪ್ರತಿನಿಧಿಗಳ ಮೇಲೆ ರಾಷ್ಟ್ರದ ಹಾಗೂ ಪ್ರಜೆಗಳ ಹಿತ ಕಾಪಾಡುವ ಗುರುತರ ಹೊಣೆ ಇರುತ್ತದೆ. ಅಮೆರಿಕ ಮತ್ತು ಇಂಗ್ಲೆಂಡ್‌ಗಿಂತ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದರೆ ಭಾರತವೇ ಆಗಿದೆ. ಹಾಗಾಗಿ ಅವರ ಹೊಣೆಗಾರಿಕೆಯೂ ಹೆಚ್ಚಿನದಾಗಿದೆ.

ವೇದಕಾಲದಿಂದ ವರ್ಣವ್ಯವಸ್ಥೆಯಲ್ಲಿ ನಲುಗಿದ ಭಾರತ ವಿವಿಧರೀತಿಯ ಹಾಗೂ ಅನ್ಯರ ಕೈಕೆಳಗೆ ಅಸ್ವತಂತ್ರವಾಗಿ ಅಂತಿಮವಾಗಿ ೧೯೪೭ರಲ್ಲಿ ಸ್ವತಂತ್ರವಾಯಿತು. ಆ ಸಂದರ್ಭದಲ್ಲಿ ಇಂಗ್ಲೆಂಡಿನ ಮಾಜಿಪ್ರಧಾನಿ ಅಂದಿನ ಹಾಲಿ ಪ್ರಧಾನಿ ಅಟ್ಲಿಗೆ ಹೇಳಿದ ಎಚ್ಚರಿಕೆಯ ಮಾತೆಂದರೆ 'ಸ್ವಂತಂತ್ರ ಭಾರತದಲ್ಲಿ ಅಧಿಕ್ಷಾರ ಎನ್ನುವುದು ದಗಾಕೋರರ, ಠಕ್ಕರ ಹಾಗೂ ನಿರಂಕುಶ ದರೋಡೆಕೋರರ ಕೈಗೆ ಹೋಗುತ್ತದೆ. ಗಾಳಿಯೊಂದನ್ನು ಬಿಟ್ಟು ಒಂದು ಸೀಸೆ ನೀರಾಗಲಿ ಇಲ್ಲ ತುಂಡು ಬ್ರೆಡ್ಡಾಗಲೀ ತೆರಿಗೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ಅವರು ತಮ್ಮ ತಮ್ಮೊಳಗೇ ಹೊಡೆದಾಡುತ್ತಾರೆ. ಈ ಬಹಿರಂಗ ಕಾದಾಟದಿಂದಾಗಿ ಭವ್ಯಭಾರತ ಕಳೆದು ಹೋಗುತ್ತದೆ. ನಿಜ. ಆತ ಅಂದೆ ಹೇಳಿದ 'ಭವ್ಯಭಾರತ'ದ ತಾಯಿಬೇರನ್ನು ಸ್ವತಂತ್ರಭಾರತ ದಶಕಗಳು ಕಳೆದಂತೆ ಸತ್ವಹೀನಗೊಳಿಸುತ್ತಲೇ ಸಾಗುತ್ತಿದೆ.

ಅಮೆರಿಕ ಇಂಗ್ಲೆಂಡ್‌ಗಳಲ್ಲಿ ಎರಡು ಪಕ್ಷಗಳಿದ್ದರೆ ಭಾರತದ ಸಂವಿಧಾನ ಬಹುಪಕ್ಷಗಳಿಗೆ ಅವಕಾಶ ನೀಡಿದೆ. ಭಾರತದ ರಾಜಕೀಯ ಪಕ್ಷಗಳ ಅಂತರಂಗವನ್ನು ಅರಿತಿದ್ದ ಡಾ.ಲೋಹಿಯಾ ನಾವು ಸಂವಿಧಾನವನ್ನು ಅಳವಡಿಸಿಕೊಂಡ ಒಂದು ತಿಂಗಳಿಗೆ ಸರಿಯಾಗಿ ಅಂದರೆ ಫೆಬ್ರವರಿ ೨೬ರಂದು 'ವಿವಿಧ ಪಕ್ಷಗಳಲ್ಲಿ ಒಡಕಿರುವುದು ಸಹಜ. ಆದರೆ ಒಂದೇ ಪಕ್ಷದೊಳಗೆ ಒಡಕಿರುವುದು ವಿಚಿತ್ರ ಲಕ್ಷಣ. ಸ್ಪಷ್ಟವಾದ ಧ್ಯೇಯವಿಲ್ಲದೆ ಜನರು ಉದ್ರಿಕ್ತರಾಗುವುದು, ಸಂಚುಮಾಡುವುದು, ಕೂಟಕಟ್ಟುವುದು ಮತ್ತು ಅಧಿಕಾರಕ್ಕಾಗಿ ಹಾತೊರೆಯುವುದು ಸಾಮಾನ್ಯವಾಗುತ್ತದೆ. ಅದರ ಪರಿಣಾಮ

ಅನೈಕ್ಯತೆ, ಅರಾಜಕತೆ, ಅಂತಕಾಲದ ಹೆಗ್ಗುರುತುಗಳೆಂದರೆ ಹೊಣೆಗೇಡಿತನ ಹಾಗೂ ಅಸಡ್ಡೆ' ಎಂದು ನೇರವಾಗಿ ಹೇಳಿದ್ದರು. ಅದು ಇಂದು ಉಲ್ಬಣಗೊಂಡು ದೇಶದ ಸಂಸತ್ತು, ವಿಧಾನಸಭೆ ಹಾಗೂ ವಿಧಾನಪರಿಷತ್ತುಗಳನ್ನು ಆಕ್ರಮಿಸಿ ನುಂಗಿ ನೊಣೆಯುತ್ತಿದೆ. ಸಂಸದೀಯ ನಡವಳಿಕೆ ಎಂದರೆ ಪರಸ್ಪರ ಕೆಸರಾಟ ಎನ್ನುವ ಮಟ್ಟಿಗೆ ಕುಸಿದು ಹೋಗಿದೆ. ಒಬ್ಬರು ಮತ್ತೊಬ್ಬರನ್ನು ನಿಂದಿಸುವುದೆ ತಮ್ಮ ಕರ್ತವ್ಯವನ್ನಾಗಿಸಿಕೊಂಡಿದ್ದಾರೆ. ಇಡೀ ಭಾರತ ಪರಸ್ಪರ ದೂರುವ ತವರು ಮನೆಯಾದಂತಾಗಿದೆ. ಸೌಹಾರ್ದತೆ ಶೂನ್ಯವಾಗುತ್ತಿದೆ. 'ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು ಇಸ್ಲಾಂಮಿನ ದೇಹ ಇದೊಂದೆ ನಮ್ಮ ಪುರೋಗಮನಕ್ಕೆ ದಾರಿ' ಎಂಬ ವಿವೇಕಾನಂದರ ತಿಳಿಯಾದ ಮಾತು ಅವರ ತಲೆಗೆ ಹೋಗುವುದಿಲ್ಲ. ಡಾ.ಲೋಹಿಯಾ ಹೇಳಿದಂತೆ ಅನೈಕ್ಯತೆ, ಅರಾಜಕತೆ, ಅಪ್ಪಿಹಿಡಿದ ಹೊಣೆಗೇಡಿತನ ಹಾಗೂ ಅಸಡ್ಡೆ ವಿಜೃಂಭಿಸುತ್ತಿದೆ. ಪ್ರಸ್ತುತ ಭಾರತದಲ್ಲಿ ಬಹುಸಂಖ್ಯಾತ ಭಾರತೀಯರ ಹಣದಬವಣೆ, ಪ್ರಾಕೃತಿಕ ವಿಕೋಪಗಳಿಂದಾಗಿ ಅಪಘಾತಗಳು, ಅವಘಡಗಳು, ಆತ್ಮಹತ್ಯೆಗಳು ಅವ್ಯಾಹತವಾಗಿ ನಡೆಯುತ್ತಿದ್ದು ಒಂದು ರೀತಿಯ ಆತಂಕ ಎಲ್ಲವನ್ನೂ ಆವರಿಸಿಕೊಳ್ಳುತ್ತಿದೆ.

ಭಾರತದ ಪ್ರಜಾಪ್ರಭುತ್ವದ ಅಣಕ ಎಂದರೆ ಸಂಸತ್ತು ಹಾಗೂ ವಿಧಾನ ಸಭೆಗಳು. ಬಂಡವಾಳಶಾಹಿಗಳ, ಬಹರಾಷ್ಟ್ರೀಯ ಕಂಪೆನಿಗಳ ಕಪಿ ಮುಷ್ಠಿಗೆ ಸಿಲುಕಿ ನಿರ್ವೀರ್ಯವಾಗಿರುವುದು. ಪ್ರಸ್ತುತದಲ್ಲಿ ಹಣ ಪ್ರಧಾನವಾಗಿ ರಾಷ್ಟ್ರೀಯ ಶೀಲವನ್ನು ಕಾಪಾಡುವ ಗುಣ ಗೌಣವಾಗಿದೆ. ಈ ಅನಪೇಕ್ಷಿತ ಪರಿಸ್ಥಿತಿಯನ್ನು ತಮ್ಮ ಮುಂಗಾಣ್ಕೆಯಿಂದ ಕಂಡಿದ್ದ ಡಾ.ಲೋಹಿಯಾ 'ಇಂದಿನ ಪರಿಸ್ಥಿತಿಯಲ್ಲಿ ದುರಾಸೆ ಮತ್ತು ಧನಲೋಭ ಇವುಗಳಿಂದ ಚಾರಿತ್ರ್ಯಕ್ಕೆ ದೊಡ್ಡ ಅಪಾಯ ಒದಗುತ್ತಿದೆ. ಸಾಮಾಜಿಕ ಪ್ರತಿಷ್ಠೆ ಇದಕ್ಕೆ ಇಂಧನವಾಗುತ್ತಿದೆ. ಜನರಿಗೆ ಹಣ ಬೇಕಾಗಿದೆ. ಹಣವಲ್ಲದೆ ಬೇರೇನೂ ಬೇಕಾಗಿಲ್ಲ. ಈಗ ಈ ದುರಾಸೆ, ಧನಲೋಭಗಳ ಮೇಲಿನ ಆಕ್ರಮಣ ಮೇಲಿನ ಹಂತದಲ್ಲಿ ನಡೆಯಬೇಕು. ಜನರ ವ್ಯಾಮೋಹ ತೊಡೆಯಲು ಇರುವುದು ಇದೊಂದೆ ಮಾರ್ಗ ಎಂದು ಹೇಳಿದರೆ. ಡಾ.ಅಂಬೇಡ್ಕರ್ ೨೫.೧೧.೧೯೪೯ ರ ಸಂವಿಧಾನ ರಚನಾ ಸಭೆಯಲ್ಲಿ 'ಚರಿತ್ರೆ ಪುನರಾವರ್ತನೆಗೊಳ್ಳಲಿದೆಯೇ. ಇದು ನನ್ನ ಆತಂಕದ ಪ್ರಶ್ನೆಯಾಗಿದೆ. ಜಾತಿ, ವರ್ಗ, ಪಂಥಗಳೆಂಬ ನಮ್ಮ ಹಳೆಯ ಶತ್ರು ಶಕ್ತಿಗಳ ಜೊತೆಗೆ ಭಾರತದ ಗಣರಾಜ್ಯದಲ್ಲಿ ರಾಜಕೀಯ ಪಕ್ಷಗಳೆಂಬ ಹೊಸ ಶಕ್ತಿಕೇಂದ್ರಗಳು ಸೃಷ್ಟಿಯಾಗಲಿದ್ದು ಇವುಗಳೂ ಶೋಷಕ ಶಕ್ತಿಗಳಾಗುವ ಅಪಾಯವಿದೆ. ಈ ಪಕ್ಷಗಳ ಗುರಿಯೂ ಪರಸ್ಪರ ವಿರೋಧಿ ಆಗಿರಲೂಬಹುದು. ಪ್ರತಿಯೊಂದು ತನ್ನ ಹಿತಾಸಕ್ತಿಗಾಗಿ

ಶ್ರಮಿಸುವುದು. ಜಾತಿ, ವರ್ಗ, ಪಂಥಗಳ ಹಿತಾಸಕ್ತಿಗಳೇ ಮುಖ್ಯವಾಗಿ ನಾವು ಹಲವಾರು ವರ್ಷ ವಿದೇಶೀ ಆಳ್ವಿಕೆಗೆ ಗುಲಾಮರಾದೆವು. ಒಂದು ವೇಳೆ ರಾಜಕೀಯ ಪಕ್ಷಗಳೂ ಕೂಡ ಸ್ವತಂತ್ರ ಭಾರತದಲ್ಲಿ ಸ್ವಹಿತಾಸಕ್ತಿಯನ್ನೇ ಮುಖ್ಯವಾಗಿ ಪರಿಗಣಿಸಿ ರಾಷ್ಟ್ರಹಿತವನ್ನು ಕಡೆಗಣಿಸಿದ್ದೇ ಆದಲ್ಲಿ ಈ ಸಂವಿಧಾನವೂ ನಿಷ್ಪ್ರಯೋಜಕವಾಗಿಬಿಡಬಹುದು. ಆಗ ನಮ್ಮ ಸ್ವಾತಂತ್ರ್ಯಕೂಡ ಅಪಾಯಕ್ಕೆ ಗುರಿಯಾಗಬಹುದು ಎಂದು ತಮ್ಮ ಆತಂಕದಿಂದ ಅಪಾಯಕ್ಕೆ ತುತ್ತಾಗುವ 'ಸ್ವತಂತ್ರ' ದ ಬಗ್ಗೆ ಎಚ್ಚರಿಸಿದ್ದಾರೆ.

ಈಗ ಭಾರತದಲ್ಲಿ ಒಂದು ರೀತಿಯ ಅಘೋಷಿತ ಏಕ ವ್ಯಕ್ತಿಯ ಆಡಳಿತದ ಅನುಭವ ಎಲ್ಲರನ್ನೂ ತಟ್ಟುತ್ತಿದೆ. ಮುಂದೊಂದು ದಿನ ತುರ್ತುಪರಿಸ್ಥಿತಿ ಅಡಿಯಲ್ಲಿ ಸರ್ವಾಧಿಕಾರಿಯಾಗಿ ಬಿಡಬಹುದಾದ ಎಲ್ಲ ಲಕ್ಷಣಗಳೂ ಗೋಚರಿಸುತ್ತಿರುವುದನ್ನು ಅಲ್ಲಗಳಿಯಲಾಗದು. ಏಕೆಂದರೆ ಕೇಂದ್ರದ ಆಡಳಿತವಿರುವ ಪಕ್ಷದ ಹಿಂದಿರುವ ಶಕ್ತಿಗಳು ಬಾಬರಿ ಮಸೀದಿ ಕೆಡವಲು ಅಂಬೇಡ್ಕರ್ ಸ್ಮರಣದಿನವಾದ 'ಡಿಸೆಂಬರ್ ಆರನ್ನು' ಹಾಗೂ ಮಾಜಿಪ್ರಧಾನಿ ವಾಜಪೇಯಿ ಪೋಕ್ರಾನಿನಲ್ಲಿ ಅಣುಬಾಂಬ್ ಸಿಡಿಸಲು 'ಬುದ್ಧಪೂರ್ಣಿಮೆ'ಯ ದಿನವನ್ನೆ ಆಯ್ಕೆಮಾಡಿದ್ದು ಅದನ್ನು ಆಕಸ್ಮಿಕ ಎನ್ನುವಂತಿಲ್ಲ. ಏಕೆಂದರೆ ಅಂತರಂಗ ಬಹಿರಂಗಗಳು ಭಗ್ನಗೊಂಡಿರುವ ಹೀನಸ್ಥಿತಿ ಭಾರತದ್ದು. ಭಾರತದಲ್ಲಿ ಅವು ಒಂದಾಗುವ ದಿನ ಎಂದಾದರೂ ಬಂದೀತೆ? ಆಶ್ಚರ್ಯವೆಂಬಂತೆ ಅವು ಒಂದಾದದಿನದಂದು ಭಾರತ ಬೆಳಗುತ್ತದೆ, ವಿಶ್ವದ ಬೆಳಕಾಗುತ್ತದೆ.

ವಿಶ್ವದಲ್ಲೆ ಭಾರತದ ಸಂವಿಧಾನ ಶ್ರೇಷ್ಠವಾದುದು ಎಂಬುದು ಸಂವಿಧಾನ ತಜ್ಞರ ಅಭಿಪ್ರಾಯ. ಏಕೆಂದರೆ ಸಂವಿಧಾನರಚನಾಕಾರರ ಶ್ರಮದಿಂದ ಪ್ರಪಂಚದ ಎಲ್ಲ ದೇಶಗಳ ಸಂವಿಧಾನಗಳನ್ನೂ ಅಧ್ಯಯನ ಮಾಡಿ ಅಲ್ಲಿಯ ಉತ್ತಮ ಅಂಶಗಳನ್ನೂ ಭಾರತೀಯ ಸಂದರ್ಭಕ್ಕೆ ಅನುಗುಣವಾಗಿ ಭಾರತದ ಸಂವಿಧಾನದಲ್ಲಿ ಅಳವಡಿಸಲಾಗಿದೆ. ೧೯೪೭ರಿಂದ ಮೂರು ವರ್ಷಗಳ ಕಾಲ ಮೂರು ಸಂವಿಧಾನ ಕರಡು ಪ್ರತಿಗಳನ್ನು ಎಂಟು ತಿಂಗಳ ಕಾಲ ಸಾರ್ವಜನಿಕರ ಪರಾಮರ್ಶೆಗೆ ಇಟ್ಟು ಸಾರ್ವಜನಿಕರಿಂದ ೭೬೩೫ ತಿದ್ದುಪಡಿಗಳು ಸೂಚಿಸಲ್ಪಟ್ಟು ಅರ್ಹವೆನಿಸಿದ ೨೪೭೭ ತಿದ್ದುಪಡಿಗಳ ಬಗ್ಗೆ ಚರ್ಚಿಸಿ ಅಂತಿಮವಾಗಿ ೨೬.೧.೧೯೫೦ ರಂದು ಭಾರತದ ಸಂವಿಧಾನವನ್ನು ಅಂಗೀಕರಿಸಲಾಯ್ತು. ಆದರೂ ಭಾರತದ ಸಂವಿಧಾನ ಸರಿಯಿಲ್ಲ ಎನ್ನುವ ಆರೋಪ ಅಲ್ಲಲ್ಲಿ ಕೇಳಿಬರುತ್ತಿದೆ. ಒಂದು ಆಯುಧ ಶ್ರೇಷ್ಠವಾಗಿರಬಹುದು. ಆದರೆ ಅದರ ಉಪಯೋಗ ಬಳಸುವವನ ವಿವೇಕದಲ್ಲಿರುತ್ತದೆ. ವಿವೇಕವಿದ್ದರೆ ಅದರಿಂದ ಜೀವವುಳಿಸಬಹುದು. ವಿವೇಕ ಇರದಿದ್ದರೆ ಜೀವತೆಗೆಯಬಹುದು. ಈ ಹಿನ್ನೆಲೆಯಲ್ಲಿ ಡಾ.ಅಂಬೇಡ್ಕರ್ 'ಮಾರ್ಗದರ್ಶನಕ್ಕಾಗಿ ತಮ್ಮ ಕಡೆ ಮೊಗಮಾಡಿರುವ ಜನಸಾಮಾನ್ಯರಿಗೆ ಸರಿಯಾದ ಮಾರ್ಗದಲ್ಲಿ ತಿಳುವಳಿಕೆ ನೀಡುವಲ್ಲಿ ಬುದ್ಧಿವಂತ ವರ್ಗದವರು ಅತ್ಯಂತ

ಅಸಡ್ಡೆ ತೋರುವವರಾಗಿರುತ್ತಾರೆ ಇಲ್ಲಾ ಅತ್ಯಂತ ಅಪ್ರಾಮಾಣಿಕರಾಗಿರುತ್ತಾರೆ. ಒಂದು ಸಂವಿಧಾನ ಎಷ್ಟೇ ಶ್ರೇಷ್ಠವಾಗಿದ್ದರೂ ಅದನ್ನು ಅಳವಡಿಸುವ ಜನ ಶ್ರೇಷ್ಠರಾಗಿರದಿದ್ದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಒಂದು ಸಂವಿಧಾನ ಶಿಥಿಲವಾಗಿದ್ದರೂ ಅಳವಡಿಸುವ ಜನ ಶ್ರೇಷ್ಠರಾಗಿದ್ದರೆ ಅವರಿಂದ ಹೆಚ್ಚು ಪ್ರಯೋಜನ ಪಡೆಯಬಹುದು' ಎಂದು ಅಂದೆ ಎಚ್ಚರಿಸಿದ್ದಾರೆ.

ವರ್ಣವ್ಯವಸ್ಥೆಯಲ್ಲಿ ನಲುಗಿದ ಭಾರತ ಮಾನಸಿಕವಾಗಿ ಗುಲಾಮೀಯವಾಗಿಯೇ ಇತ್ತು. ಅದರ ಹೃದಯ ಹಾತೊರೆಯುತ್ತಿದ್ದುದು ತ್ಯಾಗಕ್ಕಲ್ಲ, ಭೋಗಕ್ಕೆ. ಸ್ವಾರ್ಥ ಹೆಡೆಯಾಡುತ್ತಿತ್ತು. ಗಾಂಧೀಜಿಅವರ ಆತ್ಮಕಥೆಯಲ್ಲಿ 'ಒಂದು ದುರಂತಕಾಗಿ ವಿದ್ಯಮಾನ' ಎಂಬ ಟಿಪ್ಪಣಿಯಲ್ಲಿ 'ಸಂವಿಧಾನ ಸಭೆಯಲ್ಲಿ ಇರಬಯಸುವ ವ್ಯಕ್ತಿಗಳ ಎಷ್ಟೊಂದು ಪತ್ರಗಳು ನನ್ನ ಟಪಾಲಿನಲ್ಲಿರುತ್ತವೆಂದರೆ ನನಗೆ ಹೆದರಿಕೆಯಾಗುತ್ತದೆ. ಬುದ್ಧಿಜೀವಿವರ್ಗ ಭಾರತದ ಸ್ವಾತಂತ್ರ್ಯಕ್ಕಿಂತ ವೈಯಕ್ತಿಕ ಸುಖಲೋಲುಪತೆಯ ಬಗ್ಗೆ ಹೆಚ್ಚು ಆತುರದಲ್ಲಿದೆ, ಎಂಬ ಸಾರ್ವತ್ರಿಕ ಭಾವನೆಯ ಸೂಚಕವೋ ಇದು ಎಂದು ಸಂಶಯ ಬರುತ್ತಿದೆ. ಎಂದು ನೊಂದು ೧೯೪೭ರಲ್ಲಿಯೆ ಬರೆದುಕೊಂಡಿದ್ದಾರೆ. ನಿಜ, ಇಂದು ಬುದ್ಧಿಜೀವಿವರ್ಗ ಭಾರತದ ಸ್ವಾತಂತ್ರ್ಯದ ಮೌಲ್ಯವನ್ನು ಎತ್ತಿಹಿಡಿಯುವುದಕ್ಕಿಂತ ವೈಯಕ್ತಿಕ ಸುಖಲೋಲುಪತೆಯಲ್ಲಿ ತೊಡಗಿಸಿಕೊಂಡಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ. ಚುನಾಯಿತ ಪ್ರತಿನಿಧಿಗಳು ದೇಶದುದ್ದಗಲ ಬಡವರ ರಕ್ತ ಬಸಿದ ತೆರಿಗೆ ಹಣದಿಂದ ಸರ್ಕಾರದ ಬೊಕ್ಕಸಕ್ಕೆ ಹೆಗ್ಗಣಗಳಾಗಿರುವ ದುಸ್ಥಿತಿಯಲ್ಲಿ ಭಾರತ ನಲುಗುತ್ತಿದೆ.

'ಸ್ವಾತಂತ್ರ್ಯಾನಂತರ ಕಾಣಿಸಿಕೊಂಡ ಭಾರತ ಒಂದು ವಿಚಿತ್ರ ಭಾರತ. ಗುಲಾಮಗಿರಿಯಲ್ಲಿದ್ದಾಗ ಹೊರಗೆ ಕತ್ತಲೆ ಕವಿದಿತ್ತು, ಆದರೆ ಒಳಗೆ ಬೆಳಕಿತ್ತು. ಈಗ ಹೊರಗೆ ಸ್ವಾತಂತ್ರ್ಯದ ಬೆಳಕಿದೆ, ಆದರೆ ಒಳಗೆ ಕತ್ತಲೆ ಕವಿದಿದೆ' ಎಂದ ಡಾ.ಲೋಹಿಯಾ ಅವರ ಮಾತು ಸ್ಪಷ್ಟವಾಗಿದೆ. ಡಾ.ಲೋಹಿಯಾ ಲೋಕಸಭೆಯಲ್ಲಿ ಮಾತನಾಡಲು ಎದ್ದು ನಿಂತರೆಂದರೆ ಇಡೀ ಸಭಾಂಗಣ ನಿಶ್ಯಬ್ದದಿಂದ ಕೂಡಿರುತ್ತಿತ್ತು. ಈಗಿನಂತೆ ಸಂತೆಯಾಗಿರುತ್ತಿರಲಿಲ್ಲ. ಭಾರತದಲ್ಲಿ ದಶಕಗಳು ಕಳೆದಂತೆ ಗಾಂಧೀಜಿಯವರ ಗ್ರಾಮೀಣ ಭಾರತದ ಮಾರ್ಗದಿಂದ ಹೊರಳಿದ ಕಾರಣ ಎಲ್ಲರ ಹೃದಯದಲ್ಲಿ ಬರಿಯ ಕತ್ತಲೆಯಲ್ಲ, ಕಗ್ಗತ್ತಲು ಕವಿಯುತ್ತಿದೆ. ದೇಶದ ಪ್ರಜಾತಂತ್ರ ಅಪಾಯದ ಅಂಚಿಗೆ ಸಾಗುತ್ತಿದೆ. ಮತ್ತೊಮ್ಮೆ ಸ್ವಾತಂತ್ರ್ಯಪೂರ್ವದ ಕೆಚ್ಚಿನ ಹೊಂಬೆಳಕು ಭಾರತೀಯರ ಹೃದಯದಲ್ಲಿ ಹೊರಹೊಮ್ಮಿ ನಿಜವಾದ ಸ್ವಾತಂತ್ರ್ಯದ ಬನಿ ಹೃದಯಕ್ಕೆ ಹನಿದೀತೆ? ರಾಷ್ಟ್ರಕವಿ ಕುವೆಂಪು ಹೇಳುವಂತೆ 'ಕತ್ತಿ ಪರದೇಶಿಯಾದರೆ ಮಾತ್ರ ನೋವೆ? ನಮ್ಮವರೆ ಹದಹಾಕಿ ತಿವಿದರದು ಹೂವೆ?'. ಜಾಗೃತವಾಗಬೇಕಿದೆ.

ಗಾಂಧಿ ಹೀಗೆ ಹೇಳಿದ್ದಾರೆ...ಕೇಳಿ

ಅನುವಾದಕರು – ಕುವೆಂಪು

ಆತ್ಮಶ್ರೀವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಲಂಕ. ರಾಜಕಾರಣ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೊ ಅದು ಅಧ್ಯಾತ್ಮ ಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕನ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತನೆಂದರೂ ಒಂದೇ, ಸತ್ಯವೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿಯೆಂದೂ, ಹಿಂಸೆಯ ಮೂರ್ತಿ ಎಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ನನ್ನ ಬದುಕಿನ ಅತ್ಯಂತ ಆತ್ಮೀಯ ವಸ್ತುಗಳಿಂದ ರಾಜಕೀಯವನ್ನು ಬೇರ್ಪಡಿಸಲಾರೆ. ಕಾರಣ ಇಷ್ಟೆ; ನನ್ನ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿದೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂಬುದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇಬೇಕು.

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನು ಕಟ್ಟಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯ ಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸುಧಾರಣನಂತೆ ಪ್ರಯತ್ನಿಸಿದ್ದೇನೆ; ಅಷ್ಟೆ. ಸತ್ಯ ಅಹಿಂಸೆ – ಈ ಭಾವಗಳು ಪರ್ವಗಳಷ್ಟೇ ಪುರಾತನವಾದವು. ನನ್ನ ಶಕ್ತಿಗೆ ಸಾಧ್ಯವಾದಷ್ಟು ವಿಪುಲ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೆ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ; ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ. ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶ ಹೊಂದಲಿ. ಸತ್ಯ ಅಹಿಂಸೆಗಳು ಅಜರಾಮರ. ಆದರೆ ಗಾಂಧೀಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶ ಯೋಗ್ಯವೇ

ನಿಜ. ತಾನು ಗಾಂಧಿಯ ಅನುಯಾಯಿ ಎಂದು ಯಾರೊಬ್ಬನೂ ಹೇಳದಿರಲಿ. ನಾನು ನನ್ನನ್ನು ಅನುಸರಿಸಿದರೆ ಸಾಕು. ಅದರಲ್ಲೂ ನಾನು ಎಂತಹ ಅಸಮರ್ಪಕ ಅನುಯಾಯಿ ಎಂಬುದನ್ನು ನಾನು ಬಲ್ಲೆ; ಯಾವ ತತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ; ಸಹ ವಿದ್ಯಾರ್ಥಿಗಳು, ಸಹ ಯಾತ್ರಿಕರು, ಸಹ ಅನ್ವೇಷಕರು, ಸಹ ಉದ್ಯೋಗಿಗಳು.

ನನ್ನ ದೇಶಕ್ಕಾಗಿ ನಾನು ತ್ಯಾಗ ಮಾಡಲಾರದುದು ಈ ಜಗತ್ತಿನಲ್ಲಿ ಏನೂ ಇಲ್ಲ – ಎರಡರ ಹೊರತು. ಅವು ಸತ್ಯ ಮತ್ತು ಅಹಿಂಸೆ. ಇಡೀ ಜಗತ್ತನ್ನೇ ನನ್ನ ಮುಂದಿಟ್ಟರೂ ಈ ಎರಡನ್ನು ಮಾತ್ರ ನಾನು ಬಿಡಲಾರೆ. ಏಕೆಂದರೆ ನನ್ನ ಪಾಲಿಗೆ ಸತ್ಯವೇ ದೇವರು. ಸತ್ಯಸಾಧನೆಗೆ ಅಹಿಂಸೆಯಲ್ಲದೆ ಅನ್ಯ ಪಥವಿಲ್ಲ. ಸತ್ಯ ಅಥವಾ ಭಗವಂತನನ್ನು ಬಲಿಗೊಟ್ಟು ಭಾರತಕ್ಕೆ ಸೇವೆ ಸಲ್ಲಿಸುವ ಆಲೋಚನೆಯನ್ನು ನಾನು ಮಾಡಲಾರೆ. ನಾನು ಬಲ್ಲೆ. ಸತ್ಯವನ್ನು ಕೈಬಿಡಬಲ್ಲವನು ತನ್ನ ದೇಶವನ್ನೂ ಕೈ ಬಿಡಬಲ್ಲ, ಆಪ್ತೇಷ್ಟರನ್ನೂ ಕೈಬಿಡಬಲ್ಲ. ನನ್ನಾತ್ಮ ಮತ್ತು ನನ್ನ ಕರ್ತ ಇಬ್ಬರೂ ಮೆಚ್ಚುವಂತೆ ನಾನು ಹೋದೆಡೆಯೆಲ್ಲ ನನ್ನ ಕರ್ಮಕ್ಷೇತ್ರದ ಗಾಯತ್ರಿಗಳಾದ ಈ ನನ್ನ ಧರ್ಮಸೂತ್ರಗಳನ್ನು ಸಾರುತ್ತ ಹೋಗುತ್ತೇನೆ.

ಮಹಾತ್ಮಾ ಎಂಬುದನ್ನು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಹೆಚ್ಚಾಗಿ ಪಾತ್ರರಾಗುತ್ತಾರೆ. ನಾನು ಯಾವ ತತ್ವಗಳನ್ನು ಜೀವನದಲ್ಲಿ ಅನುಷ್ಠಾನ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆಯೊ ಅದನ್ನು ತಾವು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು; ಇಲ್ಲವೆ ಅದರಲ್ಲಿ ಅವರಿಗೆ ನಂಬುಗೆ ಇರದಿಲ್ಲ ಪಕ್ಷದಲ್ಲಿ ಅದನ್ನು ಸರ್ವರೀತಿಯಿಂದಲೂ ವಿರೋಧಿಸಬೇಕು – ಇದೇ ನನ್ನ ಮಿತ್ರರು ನನಗೆ ತೋರಿಸಬಹುದಾದ ಪರಮ ಗೌರವ. ಯಾವ ಮಹಾ ಉದ್ಯಮದಲ್ಲಿಯೆ ಆಗಲಿ ನಿರ್ಣಯಕಾರಿಯಾಗುವುದು ಹೋರಾಡುವವರ ಸಂಖ್ಯೆಯಲ್ಲ, ಅವರ ಸತ್ವ. ಜಗತ್ತಿನ ಮಹಾವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು. ಝುರತುಷ್ಟ್ರ, ಬುದ್ಧ, ಯೇಸು, ಮಹಮ್ಮದ್ ಈ ಎಲ್ಲ ಮಹಾ ಪ್ರವಾದಿಗಳನ್ನೂ ಗಮನಿಸಿ. ನಾನಿನ್ನೂ ಹೆಸರಿಸಬಹುದಾದ ಇತರ ಹಲವರಂತೆಯೆ ಅವರೆಲ್ಲರೂ ಏಕಾಂಗಿಯಾಗಿಯೆ ಕೆಲಸ ಮಾಡಿದರು. ಆದರೆ ಅವರಿಗೆ ತಮ್ಮಲ್ಲಿಯೂ ಭಗವಂತನಲ್ಲಿಯೂ ಜೀವಂತ ಶ್ರದ್ಧೆಯಿತ್ತು; ಭಗವಂತ ತಮ್ಮ ಪಕ್ಕದಲ್ಲಿದ್ದಾನೆಂಬ ವಿಶ್ವಾಸ ಇದ್ದುದರಿಂದ ತಾವು ಏಕಾಕಿಗಳು ಎಂಬ ಭಾವನೆಯೆ ಅವರಿಗೆ ಬರಲಿಲ್ಲ.

"ಜಗತ್ತು ನಿನ್ನನ್ನು ತನ್ನ ಕೆಂಗಣ್ಣಿನಿಂದ ದುರುದುರನೆ ನೋಡಿದರೂ ಸರಿ. ನೀನು ಅದರ ದೃಷ್ಟಿಗೆ ದೃಷ್ಟಿ ಕೊಟ್ಟು ನಿಲ್ಲಬೇಕಾಗುತ್ತದೆ. ಭೀತಿ ಬೇಡ. ನಿನ್ನ ಹೃದಯದಲ್ಲಿ ನೆಲಸಿ ಹೀಗೆಂದು ಹೇಳುತ್ತಿರುವ ಆ ಅಣುರೂಪಿಯಲ್ಲಿ ನಿನಗೆ ಶ್ರದ್ಧೆಯಿರಲಿ. ಯಾವುದಕ್ಕಾಗಿ ನೀನು ಬದುಕಿದ್ದೀಯೋ ಯಾವುದಕ್ಕಾಗಿ ನೀನು ಮಡಿಯಬೇಕೋ ಅದಕ್ಕಾಗಿ ಮನೆ ಮಠ ಮಡದಿ ಮಕ್ಕಳು ಸರ್ವಸ್ವವನ್ನೂ ಪರಿತ್ಯಜಿಸು; ಆದರೆ ಅದರ ಸತ್ಯಕ್ಕೆ ಸಾಕ್ಷಿಯಾಗಿ ಬಾಳು".

ಗಾಂಧಿ ಎಂಬ ಸುಲಭ ಬದುಕು
ನಾಲ್ಕು ನೈಜ ದೃಷ್ಟಾಂತಗಳು

– ನಾ.ಸು.ನಾಗೇಶ್

ಗಾಂಧಿ ತುಂಬ ಆದರ್ಶದ ಬದುಕು. ಅಂತಹ ಬದುಕು ಸುಲಭ ಸಾಧ್ಯವಲ್ಲದ್ದು ಎಂದು ನಮ್ಮ ಬದುಕನ್ನು ಆ ಮಾರ್ಗದಲ್ಲಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುತ್ತೇವೆ. ಆ ಬದುಕಿನ ತೊಡಕುಗಳು ಏನು ಎನ್ನುವುದು ನಮ್ಮ ಅರಿವಿಗೆ ಬರುತ್ತಲೇ ಗಾಬರಿಯೂ ಆಗುತ್ತದೆ. ಇವತ್ತಿನ ಆಧುನಿಕ ಜಗತ್ತು ನಮಗೆ ಎಂತೆಂತಹ ಸೌಲಭ್ಯಗಳನ್ನು ಒದಗಿಸಿವೆ. ಕುಳಿತಲ್ಲಿಂದಲೇ ಪ್ರಪಂಚವನ್ನೆಲ್ಲಾ ಸಂಪರ್ಕಿಸಬಹುದಾದ ಸಾಧನಗಳು, ಟಿ.ವಿ, ಮೊಬೈಲ್, ಇಂಟರ್‌ನೆಟ್ ಸೌಲಭ್ಯಗಳು, ೨೪ ಗಂಟೆಗಳಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಗೆ ಸಾಗಬಲ್ಲ ವೈಮಾನಿಕ ಹಾರುಗಾಡಿಗಳು, ಕಣ್ಣಿಗೆ ರಾಚುವ ದರ್ಶನಾಗಾರದಲ್ಲಿರುವ ಕಾರುಗಳು ಹೀಗೆ ಮತ್ತು ಬಹಳ ಸುಲಭವಾಗಿ ಇವುಗಳನ್ನೆಲ್ಲಾ ಪಡೆಯಬಲ್ಲ ತಿಂಗಳ ಪಗಾರಗಳು, ಇಂತಹ ಆಕರ್ಷಕ, ಸುಲಭದ, ಹಾಗೂ ಲಭ್ಯವಿರುವ ಬದುಕಿನ ಆನಂದವನ್ನು ಅನುಭವಿಸುವ ಅವಕಾಶವನ್ನು ತೊರೆದು, ಶ್ರಮಪೂರ್ಣವಾದ, ಅಸಹನೀಯವಾದ, ಅಯಾಚಿತವಾದ ದರಿದ್ರ ಜೀವನವನ್ನು ಆದರ್ಶದ ಬದುಕಿನ ಆಶಯದಿಂದ ಆರಾಧಿಸಬೇಕೇಕೆ? ಅಲ್ಲವೇ? ಹೀಗೆ ಇದು ನಮ್ಮ ಎಲ್ಲರಿಗೆ 'ಗಾಂಧಿ' ಎಂದೊಡನೆ ಎದುರಾಗುವ ಚಿಂತನೆ. ಅಥವಾ ಹೀಗೆ ಯೋಚಿಸಿದಾಗ ಗಾಂಧಿ ಬದುಕು ಆ ಎತ್ತರಕ್ಕೆ ಹೋಗಿ ಆಪ್ತತೆಯ ಎಟುಕಿಗೆ ದಕ್ಕುವುದಲ್ಲ ಎನಿಸಿ, ಗೌರವಪೂರ್ಣವಾಗಿ ಮೆಚ್ಚುಗೆ ಸೂಚಿಸಿ, 'ಗಾಂಧಿ' ಯಿಂದ ದೂರ ಉಳಿದು ಬಿಡುವುದೇ ಲೇಸು ಎಂದು ಲೆಖ್ಖಿಸುವುದು ಸರಿ ಎನಿಸದಿರದು.

ಪ್ರತಿ ಗಾಂಧಿ ಜಯಂತಿಯ ಸಂದರ್ಭದಲ್ಲಿ ಗಾಂಧಿಯ ಪ್ರಸ್ತುತತೆ, ಅನುಸರಣೆ ಮತ್ತು ಅಸಾಧ್ಯತೆ ಇವುಗಳ ತಾಕಲಾಟ ಈ ದೇಶದಲ್ಲಿ ಗಾಂಧಿಯವರ ಬಗೆಗೆ ಪ್ರೀತಿ ಇಟ್ಟುಕೊಂಡಿರುವ ಅನೇಕರಿಗೆ ಉಂಟಾಗುವುದು ಅಸಹಜವೇನಲ್ಲ. ಗಾಂಧಿಯವರ ಬದುಕಿನ ರೀತಿಯನ್ನು ಬಲ್ಲ, ನಮಗೆಲ್ಲ ಆ ಬದುಕಿನ ಕಾಠಿಣ್ಯದ ಚಿತ್ರಣ, ಅಂತಹ ಬದುಕಿನ ರೀತಿಯ ಬಗೆಗೆ ನಂಬಿಕೆ ಬಂದರೂ ಆಚರಣೆಯಲ್ಲಿ ರೂಢಿಸಿಕೊಳ್ಳಲು ಅಸಾಧ್ಯವೆನಿಸುತ್ತದೆ. ಕನಿಷ್ಟ ಉಡುಗೆ, ಸರಳ ಆಹಾರ, ಗ್ರಾಮೋದ್ಯೋಗದ ಉತ್ಪಾದನೆಯ ಬಳಕೆ, ಸ್ಥಳೀಯ ಸಂಪನ್ಮೂಲಗಳಿಗೆ ಅಗತ್ಯಗಳನ್ನು ಮಿತಿಗೊಳಿಸುವುದು, ಬ್ರಹ್ಮಚರ್ಯ ಪಾಲನೆ ಹೀಗೆ ಅನೇಕ ಬದ್ಧತೆಗಳು ನಮಗೆ ಇಂದಿನ ಆಧುನಿಕ ಬದುಕಿನಲ್ಲಿ ಆಚರಣೆಗೆ ಅಸಾಧ್ಯವೋ, ನಗೆಪಾಟಲಿಗೆ ಒಳಗಾಗುವ ನಾಚಿಕೆಯ ರೂಪವಾಗಿಯೋ ಗಾಂಧಿ ಇಂದು ಅನುಸರಣೆಗೆ ಸೂಕ್ತವಲ್ಲವೆಂದು ದೂರ ಸರಿಯುತ್ತೇವೆ. ಆದರೆ, ಗಾಂಧಿಯವರ ಈ ಎಲ್ಲಾ ಕಠೋರ ಆಚರಣೆಯಲ್ಲಿ ಅವರ ವೈಯಕ್ತಿಕ ಆದರ್ಶದ ಕಾಪಾಡುವಿಕೆಯ

ಅನಿವಾರ್ಯವೂ ಇದ್ದು, ಸಾರ್ವತ್ರಿಕ ಬದುಕಿಗೆ ಸ್ವಾಸ್ಥ ಸಮಾಜಕ್ಕೆ ಬೇಕೆನ್ನಬಹುದಾದ ಬದುಕಿನ ಕ್ರಮದ ದರ್ಶನವಿದೆ ಎಂದು ಭಾವಿಸಬಹುದಾದರೆ ಅಂತಹ ಬದುಕು ಅನುಸರಣ ಯೋಗ್ಯ.

ನಾನು ಕಂಡಿರುವ ಅನೇಕ ಉದಾಹರಣೆಗಳಲ್ಲಿ ಒಂದೆರಡು ಬದುಕಿನ ಸ್ವರೂಪಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಏಕೆಂದರೆ ಈ ಬದುಕುಗಳು ಅಪರೂಪದ ಬದುಕುಗಳಲ್ಲ. ನೀವೆಲ್ಲರೂ ಇಂತಹ ಅನೇಕ ಬದುಕುಗಳನ್ನು ನಿಮ್ಮ ಆಸುಪಾಸಿನಲ್ಲಿ ಕಂಡಿರುತ್ತೀರ ಎನ್ನುವುದು ನನ್ನ ನಂಬಿಕೆ.

ನನ್ನ ಹಿರಿಯರೊಬ್ಬರು ಅವರ ಬಾಲ್ಯದ ಕಡು ಕಷ್ಟದ ದಿನಗಳನ್ನು ನನಗೆ ಹೇಳಿದ್ದರು. ಆ ಕಾಲದ ಎಲ್.ಎಸ್.ಪರೀಕ್ಷೆಯನ್ನು ಪಾಸುಮಾಡಿದ ಅವರಿಗೆ ತಮ್ಮ ಓದನ್ನು ಮುಂದುವರೆಸಲಾಗಲಿಲ್ಲ. ಸಣ್ಣಪುಟ್ಟ ಶ್ರಮಪೂರ್ಣ ಉದ್ಯೋಗವನ್ನು ಮಾಡುತ್ತಿದ್ದ ಅವರು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದರು. ಬ್ರಾಹ್ಮಣರಾಗಿದ್ದು ಆ ದಿನಗಳಲ್ಲಿ ಎಲ್ಲಾ ಜಾತಿಯ, ವರ್ಗದ ಜನರೊಡನೆ ಚಳುವಳಿಯಲ್ಲಿ ಭಾಗವಹಿಸಿ, ಜೈಲು ಸೇರಿದ್ದಾರೆ. ಅಲ್ಲಿನ ಜಾತ್ಯಾತೀತ ವಾತಾವರಣವನ್ನು ಆನಂದಿಸಿದ್ದಾರೆ. ವರೋಪಚಾರ ಪಡೆಯದೇ ವಿವಾಹವಾದರು. ದೈಹಿಕ ಶ್ರಮವನ್ನು ಲೆಕ್ಕಿಸದೇ ದುಡಿದರು. ಸ್ವಾತಂತ್ರೋತ್ತರದಲ್ಲಿ ಕಾಂಗ್ರೆಸ್ ವಿಸರ್ಜಿಸಬೇಕೆಂಬ ಗಾಂಧಿಯವರ ನಿಲುವಿಗೆ ಬದ್ಧರಾಗಿ ಕಾಂಗ್ರೆಸ್‌ನಿಂದ ಹೊರಬಂದರು. ರಾಜಕೀಯವನ್ನು ತೊರೆದು ಸ್ವತಂತ್ರ ಉದ್ಯಮವನ್ನು ಪ್ರಾರಂಭಿಸಿದರು. ದೈಹಿಕ ಶ್ರಮ, ಜೀವನೋತ್ಸಾಹ ಮತ್ತು ಬುದ್ಧಿವಂತಿಕೆಯಿಂದ ಅಷ್ಟಿಷ್ಟು ಹಣವನ್ನು ಸಂಪಾದಿಸಿದರು. ಆದರೆ ಯಾರಿಗೂ ವಂಚನೆ ಮಾಡಿದ ಉದಾಹರಣೆಗಳಿಲ್ಲ. ಅವರ ಪ್ರಾಮಾಣಿಕತೆ ಮತ್ತು ಸಾಮಾಜಿಕ ಚಟುವಟಿಕೆಗಳು ಅಪನಂಬಿಕೆಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿತ್ತು. ಮಕ್ಕಳಿಗೆ ಶ್ರಮ ಮತ್ತು ಪ್ರಯತ್ನದ ಅರಿವನ್ನು ಕಲಿಸಿದ್ದರು. ಆಧುನಿಕತೆ ವಿಸ್ತರಿಸಿದಂತೆಲ್ಲಾ ಅದರ ಪ್ರಯೋಜನವನ್ನು ಅವರು ನಿರಾಕರಿಸಲಿಲ್ಲ. ಆದರೆ ಅವರ ಎಂಭತ್ತನೇ ವಯಸ್ಸಿನವರೆಗೂ ಸೈಕಲ್ ಬಳಸುತ್ತಿದ್ದರು. ಕಾಲಾವಕಾಶವಿದ್ದಾಗ ದೂರಗಳನ್ನು ನಡೆದು ಕ್ರಮಿಸುತ್ತಿದ್ದರು. ಮನೆ ಮಂದಿಯೆಲ್ಲಾ ಒಟ್ಟಿಗೆ ಪ್ರಯಾಣಿಸುವ ಸಂದರ್ಭಗಳಲ್ಲಿ ಅವರೇ ಕೊಂಡಿದ್ದ ಕಾರು ಬಳಸುತ್ತಿದ್ದರು. ಆರಂಭದ ಕಾಲದಲ್ಲೇ ರೇಡಿಯೋ, ಟಿ.ವಿ.ಗಳನ್ನು ಕೊಂಡಿದ್ದರು. ಹೀಗೆ ಎಲ್ಲಾ ಆಧುನಿಕ ಸೌಕರ್ಯಗಳಿಗೆ ತೆರೆದುಕೊಳ್ಳುತ್ತಿದ್ದರೂ ಎಲ್ಲೂ ಅವುಗಳು ವ್ಯಾಮೋಹದ ಭಾಗವಾಗುತ್ತಿರಲಿಲ್ಲ. ಅವರ ಔದಾರ್ಯ ಮತ್ತು ಜನೋಪಯೋಗಿ ಜೀವನ ಹಾಗೂ ಸಮಾಜಮುಖಿಯಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದ ಬಗ್ಗೆ ಎಲ್ಲವೂ ಶುದ್ಧ ಜೀವನ ಪ್ರೀತಿಯ ಭಾಗವಾಗಿತ್ತು.

ನನ್ನ ಆಪ್ತವಲಯದ ಇನ್ನೊಬ್ಬ ಮಹಾನುಭಾವರು ಸರ್ಕಾರದ ನೀರಾವರಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಹುದ್ದೆಗೆ ಏರಿ ಈಗ ನಿವೃತ್ತರಾಗಿದ್ದಾರೆ. ಸಾಧಾರಣ ಮಧ್ಯಮವರ್ಗದ ಕುಟುಂಬದಿಂದ ಬಂದು ಅವರು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ, ಯಾವುದೇ ಪ್ರಲೋಭನೆಗೆ ಒಳಗಾಗದೇ ಇಲಾಖೆಯ

ಕಾರ್ಯಕ್ಕೆ ಪೂರ್ಣ ಬದ್ಧರಾಗಿ ಕಾರ್ಯನಿರ್ವಹಿಸಿದರು. ಅವರ ಜಾಣ್ಮೆ ಮತ್ತು ಬದ್ಧತೆಯಿಂದ ಉನ್ನತ ವಲಯದಲ್ಲಿ ಎಲ್ಲರಿಗೂ ಬೇಕಾದ ಅಧಿಕಾರಿಯಾಗಿದ್ದರು. ಮುಖ್ಯ ಇಂಜಿನಿಯರ್ ಆಗಿ ನಿವೃತ್ತರಾದ ನಂತರವೂ ಹಲವಾರು ವರ್ಷ ಸರ್ಕಾರ ಅವರ ಸೇವೆಯನ್ನು ಬಳಸಿಕೊಂಡಿತು. ಸತ್ಯ ಹಾಗೂ ಪ್ರಾಮಾಣಿಕತೆ ಅವರಿಗೆ ನಿರ್ಭೀತ ಜೀವನಕ್ಕೆ ಕಾರಣವಾಗಿದ್ದಿತು. ಅವರ ನಿಷ್ಠುರ ಅಭಿಪ್ರಾಯಗಳಿಗೆ ಅವರ ಬದ್ಧತೆಯ ಹಿನ್ನೆಲೆಯಿಂದಾಗಿ ಉನ್ನತ ಅಧಿಕಾರಿಗಳು ಹಾಗೂ ಸಚಿವರುಗಳು ಅವರನ್ನು ತಪ್ಪಾಗಿ ಭಾವಿಸುತ್ತಿರಲಿಲ್ಲ. ಇಂದಿಗೂ ಅವರ ಜೀವನ ಅತ್ಯಂತ ಸರಳವಾಗಿದೆ. ಅನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಕಾರ್ಯಕರ್ತರಾಗಿ ಭಾಗವಹಿಸಿ, ಬಸ್ಸು, ರೈಲುಗಳಲ್ಲಿ ಸಂಚರಿಸುವಷ್ಟು ಸರಳರೂ, ಆರೋಗ್ಯವುಳ್ಳವರೂ ಆಗಿ ನಿರಾಳರಾಗಿದ್ದಾರೆ. ಇಂತಹದೊಂದು ಬದುಕು ಆದರ್ಶವೆಂದಲ್ಲ ಕಷ್ಟವೆನಿಸುವುದು. ಅಸಾಧ್ಯವೆನಿಸುವುದು ಅನುಮಾನ ಮತ್ತು ಭಯದಿಂದ ಮಾತ್ರ ಎನಿಸುತ್ತದೆ.

೧೯೭೨ರ ಸುಮಾರಿನಲ್ಲಿ ನಾನು ತುಮಕೂರಿನಲ್ಲಿ ಓದುತ್ತಿದ್ದೆ. ಅಲ್ಲಿನ ವೈದ್ಯರೊಬ್ಬರ ಬದುಕು ಹೀಗೆ ನನ್ನ ಆಕರ್ಷಣೆಯ ಭಾಗವಾಗಿತ್ತು. ಅವರ ಹೆಸರು ನಾನಿಲ್ಲಿ ಪ್ರಸ್ತಾಪಿಸದಿದ್ದರೂ ತುಮಕೂರಿನ ಜನಕ್ಕೆ ಅವರು ಯಾರೆಂಬುದು ತಕ್ಷಣಕ್ಕೆ ತಿಳಿಯುತ್ತದೆ. ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿದ್ದ ಜನಪ್ರಿಯ ಹಗೂ ಉತ್ತಮ ವೈದ್ಯರೆಂದು ಹೆಸರು ಮಾಡಿದ್ದ ಈ ವೈದ್ಯರು ಪ್ರತಿ ರೋಗಿಯಿಂದ ಕೇವಲ ಒಂದು ರೂ. ಮಾತ್ರ ಪಡೆಯುತ್ತಿದ್ದರು. (ಅದೂ ಕೊಡುವ ಶಕ್ತಿ ಇದ್ದವರಿಂದ ಮಾತ್ರ). ಆಗ ಅವರ ಸಮಕಾಲೀನ ವೈದ್ಯರುಗಳು ಹತ್ತು ರೂಪಾಯಿಗಳಿಗಿಂತ ಕಡಿಮೆಯ ಚಿಕಿತ್ಸಾ ಶುಲ್ಕವನ್ನು ಯಾರಿಂದಲೂ ಪಡೆಯುತ್ತಿರಲಿಲ್ಲ. ಮತ್ತು ಅವರೆಲ್ಲರೂ ಅತ್ಯಂತ ವೈಭವದ ಜೀವನ ನಡೆಸುವಷ್ಟು ಧನಿಕರಾಗಿದ್ದರೂ ಇವರು ವಿಚಲಿತರಾಗಿರಲಿಲ್ಲ. ಸರಳ ಮತ್ತು ತೃಪ್ತಿಯ ಜೀವನಕ್ಕೆ ಒಪ್ಪಿಕೊಂಡು ಅನೇಕ ಬಡ ರೋಗಿಗಳಿಗೆ ಜೀವದಾತರಾಗಿದ್ದರು. ಅನೇಕ ಪಟ್ಟಣಗಳಲ್ಲಿ ಇಂತಹ ಬಹಳಷ್ಟು ಮಂದಿ ವೈದ್ಯರುಗಳು ಇದ್ದಾರೆ ಎನ್ನುವುದು ನಿಮಗೆಲ್ಲ ಗೊತ್ತಿದೆ. ಇವರೆಲ್ಲರೂ ಜನಾನುರಾಗಿಗಳಾಗಿ ಜೀವನ ತೃಪ್ತಿಯನ್ನು ಪಡೆದು ಬದುಕನ್ನು ಕ್ರಮಿಸಿದ್ದಾರೆ. ವಿಷಾದವಿಲ್ಲದ ಇವರ ಬದುಕುಗಳು ಆದರ್ಶವೆಂದಲ್ಲ, ಅಸಾಧ್ಯದ ಬದುಕಲ್ಲ, ಅಲ್ಲವೇ?

ನನಗೆ ಪರಿಚಯವಿರುವ ಒಬ್ಬ ಅಧಿಕಾರಿಯಿದ್ದಾರೆ. ಈಗ ಅವರು ಕಂದಾಯ ಇಲಾಖೆಯಲ್ಲಿ ಉಪವಿಭಾಗಾಧಿಕಾರಿಗಳು. ಅವರ ಸರ್ಕಾರಿ ನೌಕರಿ ಎರಡು ತಾಲ್ಲೂಕುಗಳಲ್ಲಿ ಅಮಲ್ದಾರಿಕೆಯಿಂದ ಪ್ರಾರಂಭವಾಯಿತು. ಮೊದಲ ಕಛೇರಿಯಲ್ಲಿ ಅವರು ಕೆಲಸ ಪ್ರಾರಂಭಿಸಿದಾಗ ರಾಜಕಾರಣಿಗಳಿಂದ ಅವರಿಗೆ ತೊಂದರೆ ಪ್ರಾರಂಭವಾಯಿತು ಬಡ ರೈತನ ಅನೇಕ ಸಮಸ್ಯೆಗಳು ಕಛೇರಿಯ ಅಲೆದಾಟಗಳು ಅತ್ಯಂತ ಸುಲಭವಾಗಿ ಪರಿಹಾರವಾಗಿ ಸಾರ್ವಜನಿಕರಿಗೆ ಆಶ್ಚರ್ಯವೂ, ಅಸಂಭವವೂ ಎನ್ನುವಂತೆ ಅವರ ಕಾರ್ಯವೈಖರಿ ಇದ್ದಾಗ ರಾಜಕಾರಣಿಯೊಬ್ಬರು ತಮ್ಮ ಪೂರ್ಣ ಶಕ್ತಿಯಿಂದ ಅವರನ್ನು ಎತ್ತಂಗಡಿ ಮಾಡಿಸಿದರು. ಅವರ ದಕ್ಷತೆಯ ಅರಿವಿದ್ದ ಮತ್ತೊಬ್ಬ

ಜನನಾಯಕ ಅವರನ್ನು ತಮ್ಮ ತಾಲ್ಲೂಕಿಗೆ ವರ್ಗ ಮಾಡಿಸಿಕೊಂಡರು. ಎಲ್ಲ ಕಛೇರಿಗಳಲ್ಲಿ ಅವರು ತಮ್ಮ ಪಾಡಿಗೆ ತಾವು ದಕ್ಷತೆಯಿಂದ ಯಾರ ಮುಲಾಜಿಗೂ ಒಳಗಾಗದಂತೆ ಕೆಲಸ ನಿರ್ವಹಿಸಿದರೂ ಬಡ್ತಿ ಹೊಂದಿದ ಮೇಲೂ ಅದೇ ಕಛೇರಿಗಳ ಉಸ್ತುವಾರಿಗೆ ಅವರನ್ನು ಉಳಿಸಿಕೊಂಡರು. ಆನಪರವಾದ ಅವರ ಕಾರ್ಯವೈಖರಿಗೆ ರಾಜಕೀಯ ನಾಯಕರು ಬೆರಗಾಗಿ ಅವರ ಮೇಲೆ ಸಲ್ಲದ ಒತ್ತಡ ಹಾಕುವುದನ್ನು ಬಿಟ್ಟು, ಪಕ್ಷಾತೀತವಾಗಿ ಅವರ ಉತ್ಸಾಹ ಮತ್ತು ಕಾರ್ಯಕ್ಷಮತೆಗೆ ಬೆಂಬಲ ನೀಡುತ್ತಿದ್ದಾರೆ. ಪ್ರಾಮಾಣಿಕತೆ, ದಕ್ಷತೆ, ಉತ್ಸಾಹ ಮತ್ತು ಬದ್ಧತೆ ಇವುಗಳಿಗೆ ಈಗಲೂ ಬೆಂಬಲ ಇದೆ. ಅಪನಂಬಿಕೆಗಳನ್ನು ತೊರೆದು ನಮ್ಮನ್ನು ನಾವು ಪ್ರಾಮಾಣಿಕ ಬದುಕಿಗೆ ಸಜ್ಜುಗೊಳಿಸಿಕೊಳ್ಳಲು ಯಾವ ಆತಂಕವೂ ಇಲ್ಲ. ಗಾಂಧಿ ತೋರಿಸಿದ ಮಾರ್ಗ ಸದಾ ಸಾಧ್ಯ ಎನ್ನುವುದು ಇಂತಹ ನಂಬಿಕೆಯಿಂದ ಮಾತ್ರ.

ಈ ಬದುಕುಗಳನ್ನು ನಾನು ನೆನೆದಾಗ ಗಾಂಧಿಯವರ ಅಪೇಕ್ಷಿತ ಬದುಕಿಗಿಂತ ಹೊರತಾಗಿಲ್ಲ ಎನಿಸುತ್ತದೆ. ಗಾಂಧಿಯವರ ಅಪೇಕ್ಷೆ ಮತ್ತು ಅನುಷ್ಠಾನದಲ್ಲಿ ಬದುಕು ಅಸಹನೀಯವಾಗಬೇಕಿಲ್ಲ. ಅದೊಂದು ಪ್ರಶಾಂತ ಹಾಗೂ ಆನಂದದ ಜೀವನ ಕ್ರಮವಾಗಬೇಕು. ಹೇಗೆ ಇದು ಆಗುವುದು ಎಂಬುದನ್ನು ಪ್ರತಿಯೊಬ್ಬರೂ ತಮ್ಮಲ್ಲೇ ವಿಶ್ಲೇಷಿಸಿಕೊಳ್ಳುವುದರಿಂದ ಸುಲಭವಾಗುತ್ತದೆ. ವಾರ್ದಾ ಆಶ್ರಮದ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಗಾಂಧಿಯವರು ಸಮೀಪದಲ್ಲಿ ಲಭ್ಯವಿರುವ ಪದಾರ್ಥಗಳನ್ನು ಮಾತ್ರ ಬಳಸಬೇಕು ಎಂದು ಕಟ್ಟುಪಾಡು ಹಾಕಿಕೊಂಡರು. ಹಾಗೆಯೇ ಆ ನಿರ್ಮಾಣಗಳು ಪೂರ್ಣಗೊಂಡವು. ಆದರೆ ಈ ದಿನಗಳಲ್ಲಿ ಇಂತಹ ಕಟ್ಟುಪಾಡನ್ನು ನಾವು ಹಾಕಿಕೊಂಡು ಮನೆ ನಿರ್ಮಿಸಲು ಸಾಧ್ಯವೇ? ಅದು ಕೊನೆಗೂ ಸಾಧ್ಯವಾಗಬೇಕಾದರೆ ಕೇವಲ ಹಠದ ಬದುಕಾದೀತು. ಹಠದಿಂದ ಆನಂದವನ್ನು ಪಡೆಯಲು ಸಾಧ್ಯವೇ? ಗಾಂಧಿಯವರ ನಿರ್ಧಾರಗಳನ್ನು ಹಠವೆಂದು ವಿಶ್ಲೇಷಿಸುವುದು ಅವರನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ನಾವು ತಪ್ಪು ಮಾಡುತ್ತಿದ್ದೇವೆಂದೇ ಎನಿಸುತ್ತದೆ. ಇಂತಹ ನಿರ್ಧಾರದ ಮೂಲಕ ಅವರೊಂದು ವ್ಯಾಪಕ ದೃಷ್ಟಿಕೋನವನ್ನು ಪರಿಚಯಿಸುತ್ತಾರೆ. ಇದು ಕೇವಲ ನಾವು ಬಳಸುವ ಪದಾರ್ಥಗಳಿಗಷ್ಟೇ ಸೀಮಿತಗೊಳ್ಳದೇ ಹಲವಾರು ಬಗೆಯಲ್ಲಿ ನಮ್ಮ ದೃಷ್ಟಿಕೋನವನ್ನು ಹದಗೊಳಿಸುತ್ತದೆ. ನೈಸರ್ಗಿಕ ಸಂಪತ್ತಿನ ಸದ್ಬಳಕೆ ಬಗೆಗೆ, ಖರ್ಚುಗಳನ್ನು ಮಿತಗೊಳಿಸುವ ಬಗೆಗೆ, ಸರಕು ಸಾಗಾಣಿಕೆಗೆ ಒದಗಿಸಬೇಕಾದ ಸೌಲಭ್ಯಗಳ ಹೊರೆ ನಿವಾರಿಸುವ ಬಗೆಗೆ, ಸ್ಥಳೀಯ ಸಂಪನ್ಮೂಲಗಳನ್ನು ಗುರುತಿಸುವ ಬಗೆಗೆ ಹೀಗೆ ಅನೇಕ ಬಗೆಗಳಲ್ಲಿ ನಮ್ಮ ಆಲೋಚನೆಯನ್ನು ಪರಿಷ್ಕರಿಸುತ್ತದೆ. ಇಷ್ಟರ ಹೊರತಾಗಿಯೂ ನಮಗೆ ಅಲಭ್ಯವಾದ ಅಗತ್ಯಗಳಿಗಷ್ಟೇ ನಮ್ಮ ಎಟುಕನ್ನು ವಿಸ್ತರಿಸಿಕೊಳ್ಳುವುದಕ್ಕೆ ಈ ನಿರ್ಧಾರದ ಅಭ್ಯಂತರವಿರುವುದಿಲ್ಲ ಎನ್ನುವುದು ಹಠವಾಗದೇ ನಿರ್ಧಾರಗಳನ್ನು ಪೂರೈಸಿಕೊಳ್ಳುವ ಕ್ರಮವಾಗುತ್ತದೆ. ಗಾಂಧಿತನ ಹೀಗೆ ನಮ್ಮನ್ನು ಎಲ್ಲಾ ಕಾಲದ ಜೀವನಕ್ಕೂ ಪರಿಷ್ಕರಿಸಬಲ್ಲದು.

ಭಕ್ತಿ ಮತ್ತು ಶ್ರದ್ಧೆ

– ವಿನೋಬಾ

ಭಕ್ತಿ ಮತ್ತು ಶ್ರದ್ಧೆಗಳಲ್ಲಿ ವ್ಯತ್ಯಾಸವಿದೆ. ದೇವಸ್ಥಾನದ ಮೂರ್ತಿಯಲ್ಲಿರುವ ಆಸಕ್ತಿಯು ಭಕ್ತಿಯಲ್ಲ, ಅದು ಶ್ರದ್ಧೆ ಎನಿಸುತ್ತದೆ. ಶ್ರದ್ಧೆಯು ಭಕ್ತಿಯಲ್ಲ. ಅದು ನಿಶ್ಚಿತವಾಗಿಯೂ ಭಕ್ತಿಯಮಾರ್ಗ. ಶ್ರದ್ಧೆ ಇರುವುದೇನೂ ಮಹತ್ವದ ಸಂಗತಿಯಲ್ಲ ಆದರೆ ಶ್ರದ್ಧೆ ಇಲ್ಲದೇ ಇರುವುದು ತುಂಬ ಮಹತ್ವದ ಸಂಗತಿ ಎನಿಸುತ್ತದೆ. ಉದಾಹರಣೆಗೆ ನಮಗೆ ಅಕ್ಷರಜ್ಞಾನವಿದ್ದರೆ ಅದರಲ್ಲಿ ವಿಶೇಷವೇನೂ ಅನಿಸುವುದಿಲ್ಲ. ಆದರೆ ಅಕ್ಷರಜ್ಞಾನವೇ ಇಲ್ಲದಿದ್ದರೆ ಹೆಚ್ಚಿನ ಜ್ಞಾನವನ್ನು ಪಡೆಯುವುದು ಅಸಂಭವವೇ ಸರಿ. ಈ ದೃಷ್ಟಿಯಿಂದ ನಮ್ಮಲ್ಲಿ ಶ್ರದ್ಧೆಯೇ ಇಲ್ಲದಿದ್ದರೆ ಭಕ್ತಿಯು ಬರಲು ಸಾಧ್ಯವೇ ಇಲ್ಲ. ನಾನು–ನನ್ನದು ಎಂಬ ಅಹಂಕಾರ ಮಮಕಾರಗಳಿಂದ ಮುಕ್ತವಾಗುವುದೇ ನಿಜಾರ್ಥದಲ್ಲಿ ಭಕ್ತಿ ಎನಿಸುವುದು. ಭಾರತದೇಶದೆಲ್ಲೆಡೆ ಭಕ್ತಿಭಾವವು ಓತಪ್ರೋತವಾಗಿದೆ. ಆದರೆ ಅದು ಸಾಮಾನ್ಯವಾಗಿ ಶ್ರದ್ಧೆಯಾಗಿದೆ. ಶ್ರದ್ಧೆಯು ಬಾಲಭಾವ (ಮಕ್ಕಳ ಭಾವ) ಎನಿಸುತ್ತದೆ. ಇತ್ತ ಜ್ಞಾನವೂ ಇಲ್ಲ, ಅತ್ತ ಶ್ರದ್ಧೆಯೂ ಇಲ್ಲದ ಸಂದೇಹವುಳ್ಳ ಜನರಿಂದ ಏನೂ ಸಾಧಿತವಾಗುವುದಿಲ್ಲ. ಅಂಥವರಿಗೆ ಯಾವ ವಸ್ತುವೂ ದಕ್ಕುವುದು ಸಾಧ್ಯವಿಲ್ಲ. ಅಕಸ್ಮಾತ್ ಏನಾದರೂ ದಕ್ಕಿದರೆ ಅದರ ವಿಷಯದಲ್ಲಿಯೂ ಅವರಿಗೆ ಸಂಶಯ ಹುಟ್ಟುವುದು. ಜ್ಞಾನವೂ ಇಲ್ಲ, ಜ್ಞಾನದ ಸಾಧನವಾದ ಶ್ರದ್ಧೆಯೂ ಇಲ್ಲವಾದರೆ ಉಳಿಯುವುದೊಂದೇ ಸಂಶಯುಮಾತ್ರ. ಇಂಥ ಸಂಶಯಿ ಸಂಪೂರ್ಣವಾಗಿ ನಾಶವಾಗುತ್ತಾನೆ. (ಸಂಶಯಾತ್ಮಾವಿನಶ್ಯತಿ) ಆದರೆ ಸಾಮಾನ್ಯವಾಗಿ ಜನರಲ್ಲಿ ಜ್ಞಾನವಿಲ್ಲದಿದ್ದರೂ ಶ್ರದ್ಧೆಯಂತೂ ಇದ್ದೇ ಇರುತ್ತದೆ. ಇಂತಹ ಪ್ರಾಮಾಣಿಕ ಮತ್ತು ಮೂಲಭೂತವಾದ ಶ್ರದ್ಧೆ ಇಲ್ಲದಿದ್ದರೆ ಜೀವನ ನಡೆಯುವುದೇ ಕಷ್ಟವಾಗುತ್ತದೆ.

ಸಾಮಾನ್ಯ ಜನರು 'ರಾಮ–ಕೃಷ್ಣ–ಹರಿ ಎನ್ನುತ್ತಾರೆ. ಹಾಗೆಯೇ ಚೈತನ್ಯ ಮಹಾಪ್ರಭುಗಳೂ ಕೂಡ 'ರಾಮ–ಕೃಷ್ಣ–ಹರಿ' ಎನ್ನುತ್ತಿದ್ದರು. ಇವೆರಡರಲ್ಲಿಯೂ ಇರುವ ವ್ಯತ್ಯಾಸವೇನು? ಸಾಮಾನ್ಯ ಜನರು ಹಾಗೆ ಅನುವಲ್ಲಿ ಶ್ರದ್ಧೆ ಇದೆ. ಹರಿನಾಮ ಸ್ಮರಣೆ ಏನೋ ನಡೆಯುತ್ತದೆ. ಆದರೆ ಅದಕ್ಕೆ ತಕ್ಕ ಆಚರಣೆ ಇಲ್ಲವಾದರೆ ಅದು ಡಂಭಾಚಾರವಲ್ಲವೆ? ಖಂಡಿತವಾಗಿಯೂ ಅದು ಡಂಭಾಚಾರವಲ್ಲ. ಒಂದಿಬ್ಬರು ಡಂಭಾಚಾರಿಗಳಿದ್ದರೂ ಇರಬಹುದು. ಆದರೆ ಲಕ್ಷ–ಕೋಟಿ ಸಂಖ್ಯೆಯ ಜನ ಹರಿನಾಮ ಸ್ಮರಣೆ ಮಾಡುತ್ತಾರೆ. ಅದು ಡೋಂಗಿ ಅಲ್ಲ, ಶ್ರದ್ಧೆಯಾಗಿದೆ. ಆದರೆ ಶ್ರದ್ಧೆ ಮತ್ತು ಭಕ್ತಿಗಳಲ್ಲಿರುವ ವ್ಯತ್ಯಾಸವನ್ನು ನಾವು ಅರಿಯದಿದ್ದರೆ ಅದು ಭಕ್ತಿಯ ಅನುಕರಣ ಮಾತ್ರ ಎನಿಸುವುದು. ಹರಿನಾಮ ಸ್ಮರಣೆ ಮಾಡುವ ಸಂದರ್ಭದಲ್ಲಿ ಚೈತನ್ಯ ಮಹಾಪ್ರಭುಗಳು ಕುಣಿಯುತ್ತಿದ್ದರು. ಅವರಂತೆ ಯಾರಾದರೂ ನಾಮಸ್ಮರಣೆ ಮಾಡುವಾಗ ಕುಣಿದರೆ ಅವರಿಗೆ ಚೈತನ್ಯ ಮಹಾಪ್ರಭುಗಳಿಗಾದ ಅನುಭೂತಿ ಉಂಟಾಗಬಹುದೆ? ಶ್ರದ್ಧೆಯೊಡನೆ ನಿಷ್ಠೆಯೂ ಮೇಳೈಸಿದಾಗ ಭಕ್ತಿಯ ರೂಪ ಪ್ರಕಟಗೊಳ್ಳುವುದು.

ಉಪಾಸನೆಯಲ್ಲಿ ಜ್ಞಾನವು ಅಪೇಕ್ಷಿತವಲ್ಲ. ಆದರೆ ಶ್ರದ್ಧೆಯು ಅಪೇಕ್ಷಿತವಾಗಿದೆ.

ಶ್ರದ್ಧೆಯು ಉಪಾಸನೆಯ ಪ್ರಾಣತತ್ವವಾಗಿದೆ. ಶ್ರದ್ಧೆ ಇಲ್ಲದ ಸಾಧನೆಯು ವ್ಯರ್ಥವಾದುದು. ಮನುಷ್ಯನಲ್ಲಿ ಪ್ರಾಣವಿರುವಷ್ಟು ಶ್ರದ್ಧೆಯೂ ಇರುತ್ತದೆ. ಪ್ರಾಣಶಕ್ತಿಯಷ್ಟೇ ಶ್ರದ್ಧಾಶಕ್ತಿಯೂ ಜಾಗೃತವಾಗುತ್ತದೆ.

ಪ್ರತಿಯೊಬ್ಬ ಮನುಷ್ಯನಲ್ಲಿ ಸ್ವಲ್ಪಾದರು ಬುದ್ಧಿಶಕ್ತಿ ಇರುವಂತೆ ಶ್ರದ್ಧೆಯೂ ಇರುತ್ತದೆ. ಬುದ್ಧಿಯು ಜ್ಞಾನದ ಬಗ್ಗೆ ತಿಳಿಸಿದರೆ ಶ್ರದ್ಧೆಯು ಆ ಜ್ಞಾನದಲ್ಲಿ ಮನುಷ್ಯನನ್ನು ಸ್ಥಿರಗೊಳಿಸುವುದು. ಶ್ರದ್ಧೆ ಇಲ್ಲದೆ ಮನುಷ್ಯನು ತಾನು ತಿಳಿದ ತತ್ವ ಸಿದ್ಧಾಂತಗಳಿಗೆ ಗಟ್ಟಿಯಾಗಿ ಅಂಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಶ್ರದ್ಧೆಯಲ್ಲಿ ಸಾತ್ವಿಕ, ರಾಜಸ ಮತ್ತು ತಾಮಸವೆಂಬ ಮೂರು ಪ್ರಕಾರಗಳು. ಜ್ಞಾನರಹಿತ ಮತ್ತು ಅಶಾಸ್ತ್ರೀಯವಾದ ಶ್ರದ್ಧೆಯು ಪ್ರಗತಿಪಥದತ್ತ ಮುನ್ನಡೆಸದು. ಕೇವಲ ಸಾತ್ವಿಕ ಮತ್ತು ಶಾಸ್ತ್ರೀಯವಾದ ಶ್ರದ್ಧೆ ಮಾತ್ರ ನಮ್ಮನ್ನು ಪಾರುಗೊಳಿಸುತ್ತದೆ. ಜ್ಞಾನವು ಮೂಲಭೂತವಾಗಿ ಸಾತ್ವಿಕವಾಗಿದ್ದರೂ ಸತ್ವ – ರಜ – ತಮ ಎಂಬ ಮೂರು ಪ್ರಕಾರವಾಗಿರುವಂತೆ, ಶ್ರದ್ಧೆಯೂ ಕೂಡ ಮೂಲತಃ ಸಾತ್ವಿಕವಾಗಿದ್ದರೂ ಸತ್ವ – ರಜ – ತಮ ಎಂಬ ಮೂರು ಪ್ರಕಾರಗಳಿಂದ ಕೂಡಿದೆ. ಶ್ರದ್ಧೆಯು ಸಾತ್ವಿಕವಾಗಿದ್ದರೆ ಅದರ ಸಹಾಯದಿಂದ ನಡೆಯುವ ವ್ಯಕ್ತಿಗೆ ಯಾವುದೇ ರೀತಿಯ ಅಪಾಯಗಳಿಲ್ಲ. ಆದರೆ ಶ್ರದ್ಧೆಯು ಸಾತ್ವಿಕವಾಗಿದೆ, ರಾಜಸ ಅಥವಾ ತಾಮಸವಾಗಿದೆ ಎಂದು ತಿಳಿಯುವುದು ಹೇಗೆ? ಸಾತ್ವಿಕ ಮನುಷ್ಯರು ದೇವತೆಗಳ, ರಾಜಸ ವ್ಯಕ್ತಿಗಳು ಯಕ್ಷ ಮತ್ತು ರಾಕ್ಷಸರ, ಹಾಗೆಯೇ ತಾಮಸದಿಂದ ಕೂಡಿದವರು ಪ್ರೇತ – ಭೂತ ಪಿಶಾಚಿಗಳ ಉಪಾಸನೆ ಮಾಡುತ್ತಾರೆಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಪ್ರೇತೋಪಾಸನೆಯು ಸಂಹಾರಶಕ್ತಿಯನ್ನು ಪಡೆಯಲು ಮತ್ತು ಭೂತ ಪಿಶಾಚಿಗಳ ಉಪಾಸನೆಯು ವಶೀಕರಣ ಶಕ್ತಿಗಾಗಿ ಮಾಡಲ್ಪಡುತ್ತದೆ. ಆದರೆ ಶ್ರದ್ಧೆಯು ಸಾತ್ವಿಕವೇ ಆಗಿರಲಿ, ರಾಜಸ ಅಥವಾ ತಾಮಸವೇ ಆಗಿರಲಿ ಇದರ ನಿರ್ಣಯ ಮಾತ್ರ ಶಾಸ್ತ್ರಗಳಿಂದಲೇ ಮಾಡಲಾಗುತ್ತದೆ. ಶಾಸ್ತ್ರ ಮತ್ತು ಶ್ರದ್ಧೆಗಳು ಕೂಡಿದರೆ ಅಲ್ಲಿ ಯಾವುದೇ ರೀತಿಯ ಅಪಾಯವಿಲ್ಲ. ಶ್ರದ್ಧೆಯು ಜೀವನದ ಮೂಲಾಧಾರವಾಗಿದ್ದರೂ ಅದು ಶಾಸ್ತ್ರೀಯ ಮತ್ತು ಸಾತ್ವಿಕವಾಗಿರಬೇಕಾದುದು ಅತ್ಯವಶ್ಯ. ಶ್ರದ್ಧೆಯು ಕರ್ಮಶಕ್ತಿಯಾಗಿದೆ. ಶ್ರದ್ಧೆಯನ್ನು ಹಾಳುಮಾಡಿದರೆ ಕರ್ಮಶಕ್ತಿಯೂ ಕ್ಷೀಣಿಸುತ್ತದೆ ಮತ್ತು ಅಪೂರ್ಣ ಶ್ರದ್ಧೆಯಿಂದ ಕಾರ್ಯಗಳೂ ಅಪೂರ್ಣವಾಗುತ್ತವೆ. ಆದ್ದರಿಂದ ಶ್ರದ್ಧೆಯು ಇರಲೇಬೇಕು. ಹಾಗೆಯೇ ಅದು ಸಾತ್ವಿಕವಾದುದಾಗಿರಲೇಬೇಕು.

ಶ್ರದ್ಧೆ ಇಲ್ಲದೆ ಯಾವ ಕಾರ್ಯವೂ ಸಾಧಿತವಾಗಲಾರದು. ಶ್ರದ್ಧೆಯಿಂದಲೇ ಕೃತಿಗೆ ಮೊದಲಾಗುತ್ತದೆ. ನಂತರ ಅದು ನಿಷ್ಠೆಯಲ್ಲಿ ಪರ್ಯವಸಾನಗೊಳ್ಳುತ್ತದೆ. ನಿಷ್ಠೆಯನ್ನು ಹೊಂದುವ ಮೊದಲು ಮನುಷ್ಯನು ಶ್ರದ್ಧೆಯಿಂದ ಕಾರ್ಯವನ್ನು ಮಾಡಬಲ್ಲ. ನಿಷ್ಠೆಯು ಅನುಭವಜನ್ಯವಾದುದು. ಅಂತೆಯೇ ಅದರ ಸ್ಥಾನ ನಂತರದ್ದು. ಆದರೆ ಶ್ರದ್ಧೆ ಮಾತ್ರ ಆರಂಭದಿಂದಲೇ ಇರಬೇಕಾಗುತ್ತದೆ. ಶ್ರದ್ಧೆಯು ಗೋಡೆಯಂತೆ ಗಟ್ಟಿಯಾಗಿ ನಿಲ್ಲುತ್ತದೆ ಅಥವಾ ಬಿದ್ದುಹೋಗುತ್ತದೆ. ಅದು ಎಂಟಾಣೆ, ನಾಲ್ಕಾಣೆ ಪ್ರಮಾಣದಲ್ಲಿ ಆಂಶಿಕವಾಗಿ ನಿಲ್ಲುವುದಿಲ್ಲ. ಇದ್ದರೆ ಪೂರ್ಣಪ್ರಮಾಣದಲ್ಲಿರುತ್ತದೆ, ಇಲ್ಲದಿದ್ದರೆ ಇಲ್ಲವೇ ಇಲ್ಲ.

ಎಲ್ಲಿಯವರೆಗೆ ಶ್ರದ್ಧೆಯು ನಿಷ್ಠೆಯ ರೂಪವನ್ನು ಪಡೆಯುವುದಿಲ್ಲವೋ ಮತ್ತು ಜೀವನದ ಧ್ಯೇಯ ನಿರ್ಧಾರಿತವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಜೀವನವು

ತತ್ವಾನುಸಾರ ನಡೆಯುವುದಿಲ್ಲ. ಯಾವಾಗ ನಮ್ಮಂತರಂಗದಲ್ಲಿ ನಿಷ್ಠೆಯು ಹುಟ್ಟಿಕೊಳ್ಳುವುದೋ ಆಗಲೇ ಭಕ್ತಿಯು ಆರಂಭವಾಯಿತೆಂದರಿಯಬೇಕು. ನಿರಂತರತೆಯೇ ನಿಷ್ಠೆಯ ಲಕ್ಷಣ. ನಿಷ್ಠೆಯುಳ್ಳ ಮನುಷ್ಯನು ನಿರಂತರ ಒಂದೇ ಮಾರ್ಗವನ್ನು ಅನುಸರಿಸುತ್ತಾನೆ. ಅವನಿಗೆ ಹಾಗೆ ಮಾಡುವುದರಿಂದ ದಣಿವು ಉಂಟಾಗುವುದಿಲ್ಲ ಮತ್ತು ಭಾರವೂ ಅನಿಸುವುದಿಲ್ಲ. ಅದು ಅವನಿಗೆ ಅತ್ಯಂತ ಸಹಜವಾದ, ಸ್ವಾಭಾವಿಕವಾದ ಕ್ರಿಯೆ ಎನಿಸುತ್ತದೆ.

ನಾವು ಶ್ರದ್ಧೆಯಿಂದ ಕಾರ್ಯಾರಂಭವೇನೋ ಮಾಡುತ್ತೇವೆ, ಮಾಡುತ್ತ ಮಾಡುತ್ತ ಅದು ಸೇವೆಯಾಗುತ್ತದೆ. ನಂತರ ಅನುಭವ ಉಂಟಾಗುತ್ತದೆ. ಅದರಿಂದ ಮತ್ತೆ ನಿಷ್ಠೆಯು ಹುಟ್ಟಿಕೊಳ್ಳುತ್ತದೆ ಮತ್ತು ಆ ನಿಷ್ಠೆಯಿಂದಲೇ ನಮಗೆ ಆಂತರಿಕ ಸಮಾಧಾನವೂ ಪ್ರಾಪ್ತವಾಗುತ್ತದೆ. ಅಂತಃಸಮಾಧಾನ ಇರುವಲ್ಲಿ ಆನಂದವು ಇದ್ದೇ ಇರುತ್ತದೆ. ಆದ್ದರಿಂದ ಮೊದಲು ಶ್ರದ್ಧೆಯುಳ್ಳವರಾಗಬೇಕು. ಆಮೇಲೆ ಅನುಭವವೂ, ಅನುಭವದ ನಂತರ ಅದರ ನಿಷ್ಠೆಯು ಗಟ್ಟಿಗೊಳ್ಳುವುದು. ಶ್ರದ್ಧೆಯು ಆರಂಭದ ಸ್ಥಿತಿಯಾದರೆ, ನಿಷ್ಠೆಯು ಅಂತಿಮವಾದುದಾಗಿರುತ್ತದೆ. ಪ್ರತ್ಯಕ್ಷಾನುಭೂತಿ ಉಂಟಾಗುವವರೆಗೆ ಶ್ರದ್ಧೆಯನ್ನೇ ನಾವು ನಂಬಿಕೊಳ್ಳಬೇಕು. ಶ್ರದ್ಧೆಯು ಪ್ರಾಥಮಿಕ ಅವಸ್ಥೆಯಾಗಿದೆ. ಅದು ಪರಿಪಕ್ವವಾದಾಗ ನಿಷ್ಠೆ ಎನಿಸುತ್ತದೆ. ನಿಷ್ಠೆ ಅರ್ಥಾತ್ Conviction, ಶ್ರದ್ಧೆ ಅರ್ಥಾತ್ Faith, ನಿಷ್ಠೆ ಅರ್ಥಾತ್ ಪರಮೇಶ್ವರನಲ್ಲಿ ಅಚಲವಾದ ನಂಬಿಗೆ. ಅದಿಲ್ಲದೇ ಭಕ್ತಿ ಸಾಧ್ಯವಿಲ್ಲ. ನಮ್ಮ ಬದುಕು-ಸಾವು ಎಲ್ಲವೂ ಪರಮಾತ್ಮನಿಗಾಗಿಯೇ ಮೀಸಲು. ಭಗವಂತನಲ್ಲಿ ಸಂಪೂರ್ಣ ಶರಣಾಗತಿಯೇ ನಿಷ್ಠೆ ಎಂಬ ಮಾತಿದೆ. ಕುರಾನನಲ್ಲಿಯೂ 'ನಾನು ನಾಳೆ ಇದನ್ನು ಮಾಡುವೆ' ಎಂದು ಅನ್ನಬಾರದು, 'ಈಶ್ವರೇಚ್ಛೆ ಇದ್ದರೆ ನಾಳೆ ಇದು ಆಗಬಹುದು' ಎಂದು ಅನ್ನಬೇಕೆಂದು ಹೇಳಲಾಗಿದೆ – ಇನ್ಶಾ ಅಲ್ಲಾಹ.

ಜಗತ್ತಿನಲ್ಲಿ ಬಹಳ ಕಡಿಮೆ ಜನರಿಗೆ ಆತ್ಮಜ್ಞಾನ ಉಂಟಾಗುತ್ತದೆ. ಜ್ಞಾನವಾಗದಿದ್ದರೂ ನಡೆದೀತು. ಆದರೆ ಶ್ರದ್ಧೆಯಾದರೋ ಅವಶ್ಯವಾಗಿ ಇರಲೇಬೇಕು – ಶ್ರದ್ಧಾವಾನ್ ಲಭತೇ ಜ್ಞಾನಮ್. ಶ್ರದ್ಧೆ ಇಲ್ಲದಿದ್ದರೆ ನಡೆಯದು. ಶ್ರದ್ಧೆಯ ವಿಷಯದಲ್ಲಿ ಅನೇಕ ತಪ್ಪುಕಲ್ಪನೆಗಳೂ ಇವೆ. ಶ್ರದ್ಧೆ ಕುರುಡಾಗಿರುತ್ತದೆ. ಬುದ್ಧಿ ಮತ್ತು ಶ್ರದ್ಧೆಗಳು ಪರಸ್ಪರ ವಿರೋಧಿಯಾಗಿವೆ ಎಂದು ಜನರು ಹೇಳುತ್ತಿರುತ್ತಾರೆ. ಶ್ರದ್ಧೆ ಮತ್ತು ಬುದ್ಧಿಯಲ್ಲಿ ವ್ಯತ್ಯಾಸವೇನೋ ಇದೆ. ಆದರೆ ಅವುಗಳಲ್ಲಿ ಯಾವುದೇ ವಿರೋಧವಿಲ್ಲ. ಅವೆರಡರ ಜನನದ ಸ್ಥಾನ ಬೇರೆ ಬೇರೆಯಾಗಿದೆ. ವಿಚಾರಶಕ್ತಿಯಿಂದ ಬುದ್ಧಿಯ ಉಗಮವಾದರೆ ಪ್ರಾಣಶಕ್ತಿಯಿಂದ ಶ್ರದ್ಧೆಯ ಉಗಮವಾಗುತ್ತದೆ. 'ಶ್ರದ್ಧೆಯೊಂದನ್ನೇ ನನ್ನಲ್ಲಿಡು – ಅದರ ಮುಂದೆ ಜ್ಞಾನ ಯಾವ ಲೆಕ್ಕದ್ದು' ಎಂದು ಭಗವಂತನೇ ಹೇಳಿದ್ದಾನೆ. ಅಸ್ತೀತ್ಯೇವೋಪಲಬ್ಧವ್ಯಃ ಅಂದರೆ 'ಅವನಿದ್ದಾನೆ' ಎಂಬ ಗಟ್ಟಿ ವಿಶ್ವಾಸವಿರಲಿ. ಜ್ಞಾನ ತಾನಾಗಿಯೇ ಲಭ್ಯವಾಗುತ್ತದೆ ಎಂದು ಉಪನಿಷತ್ತು ಕೂಡ ಹೇಳುತ್ತದೆ. ಈ ಧ್ವನಿ ಹೃದಯದಿಂದ ಹೊರ ಹೊಮ್ಮಬೇಕು, ಅನ್ಯಥಾ ವಿನಾಶವೇ ಗತಿಯಾಗುವುದು. 'ಸಂಶಯಾತ್ಮಾ ವಿನಶ್ಯತಿ' ಎಂದು ಭಗವದ್ಗೀತೆಯಲ್ಲಿಯೂ ಇದನ್ನೇ ಹೇಳಲಾಗಿದೆ. ಬುದ್ಧಿಯ ಕೆಲಸ ನಡೆಯುವವರೆಗೆ ಅದನ್ನು ಉಪಯೋಗಿಸಿಕೊಳ್ಳಬೇಕು. ಯಾವಾಗ ಬುದ್ಧಿಯ ಕಾರ್ಯ ಸ್ಥಗಿತವಾಗುವುದೋ ಆಗ ಶ್ರದ್ಧೆಯಿಂದ ಆ ಕಾರ್ಯವನ್ನು

ಮುಂದುವರಿಸಬೇಕು. ಆದರೆ ಅದು ಬುದ್ಧಿಯ ನಿರ್ದೇಶನದಂತೆಯೇ ಮುಂದುವರಿಯಬೇಕು. ಬುದ್ಧಿಯು ಅಲ್ಲಗಳೆಯುವುದನ್ನು ಸ್ವೀಕರಿಸಬೇಕೆಂದು ದೇವರು ಹೇಳುವುದಿಲ್ಲ. ಆದರೆ ಯಾವುದನ್ನು ಬುದ್ಧಿಯು ಖಂಡಿಸುವುದಿಲ್ಲವೋ, ಎಲ್ಲಿ ಬುದ್ಧಿ ತಲುಪಲು ಸಾಧ್ಯವಾಗುವುದಿಲ್ಲವೊ ಅಂಥ ಸಂದರ್ಭದಲ್ಲಿ ಶ್ರದ್ಧೆಯ ಮೂಲಕ ಕಾರ್ಯನಿರ್ವಹಿಸಬೇಕು. ಆತ್ಮಜ್ಞಾನವಾಗಿಯೇ ತೀರುತ್ತದೆ ಎಂಬ ನಿಷ್ಕರ್ಷಕ್ಕೆ ಬುದ್ಧಿಯು ಬಂದಿದ್ದರೂ ಶ್ರದ್ಧೆಯಿಂದಲೇ ಮುಂದುವರಿಯಬೇಕು.

ಯಾವನೋ ಶ್ರದ್ಧಾವಂತನಿರುತ್ತಾನೆ, ಇನ್ನಾವನೋ ಬುದ್ಧಿವಂತನಿರುತ್ತಾನೆ. ಅಂದರೆ ಒಬ್ಬ ಶ್ರದ್ಧಾವಾದಿಯಾಗಿದ್ದರೆ ಮತ್ತೊಬ್ಬ ಬುದ್ಧಿವಾದಿಯಾಗಿರುತ್ತಾನೆ ಹೀಗಿರುವಾಗ ಇವರಿಬ್ಬರಲ್ಲಿ ಭೇದವೆಣಿಸುವುದು ಬಹಳ ತಪ್ಪಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ವಾಸ್ತವವಾಗಿ ಶ್ರದ್ಧೆ ಮತ್ತು ಬುದ್ಧಿ ಪರಿಪೂರ್ಣವಾಗಿ ಒಂದೇ ಸ್ಥಾನದಲ್ಲಿ ಇರಬಹುದಾಗಿದೆ. ಬುದ್ಧಿ ಮತ್ತು ಶ್ರದ್ಧೆ ಇವುಗಳಲ್ಲಿ ಯಾವುದೇ ವಿರೋಧವಿಲ್ಲ. ಬುದ್ಧಿಗೇಡಿಯೊಬ್ಬ ಶ್ರದ್ಧೆ ಇಲ್ಲದವನಾಗಿರಬಹುದು. ಹಾಗೆಯೇ ಅತ್ಯಂತ ಬುದ್ಧಿವಂತ ವ್ಯಕ್ತಿಯು ಶ್ರದ್ಧೆಯುಳ್ಳವನೂ ಆಗಿರಬಹುದು. ಬುದ್ಧಿ ಮತ್ತು ಶ್ರದ್ಧೆ ಇವೆರಡರಲ್ಲಿ ವಿರೋಧವನ್ನು ಕಲ್ಪಿಸುವುದು ತೀರ ತಪ್ಪಾಗುತ್ತದೆ. ಏಕೆಂದರೆ ಅವೆರಡರ ವಿಷಯಗಳೂ ಕಿವಿ ಮತ್ತು ಕಣ್ಣುಗಳ ವಿಷಯ ಬೇರೆ ಬೇರೆಯಾಗಿರುವಂತೆ, ಭಿನ್ನವಾಗಿವೆ. ಸುಶ್ರಾವ್ಯವಾದ ಸಂಗೀತ ಕೇಳುತ್ತಿದ್ದರೆ ಕಿವಿ ಅದರ ವಿಷಯದಲ್ಲಿ ತನ್ನ ನಿರ್ಣಯವನ್ನು ಬೇಗನೆ ವ್ಯಕ್ತಮಾಡುತ್ತದೆ. ಆದರೆ ಕಣ್ಣು ಸುಮ್ಮನಿರುತ್ತದೆ. ಏಕೆಂದರೆ ಸಂಗೀತದ ವಿಷಯದಲ್ಲಿ ಪರ ಮತ್ತು ವಿರೋಧಾಭಿಪ್ರಾಯ ವ್ಯಕ್ತಪಡಿಸುವುದು ಕಣ್ಣಿನ ಕೆಲಸ ಅಲ್ಲ. ಅಂದ ಮಾತ್ರಕ್ಕೆ ಕಿವಿ ಮತ್ತು ಕಣ್ಣುಗಳಲ್ಲಿ ಯಾವುದೋ ವಿರೋಧವಿದೆ ಎಂದು ಭಾವಿಸಬೇಕಿಲ್ಲ; ಅದೇ ರೀತಿ ಶ್ರದ್ಧೆ ಮತ್ತು ಬುದ್ಧಿಯ ಕ್ಷೇತ್ರಗಳೂ ಬೇರೆ ಬೇರೆಯಾಗಿವೆ.

ಶ್ರದ್ಧೆಯಿಂದ ಕರ್ಮಶಕ್ತಿಯೂ, ಬುದ್ಧಿಯಿಂದ ಜ್ಞಾನಶಕ್ತಿಯೂ ಪ್ರಾದುರ್ಭವಿಸುತ್ತದೆ. ಮೋಟಾರು ವಾಹನದಲ್ಲಿ ಒಂದು ಮಾರ್ಗ ಸೂಚಿಸುವ, ಮತ್ತೊಂದು ವೇಗವನ್ನು ವರ್ಧಿಸುವ ಇಂಜಿನ್ನುಗಳಿದ್ದರೂ ಅವೆರಡರಲ್ಲಿ ಯಾವುದೇ ವಿರೋಧವಿಲ್ಲ. ಅವೆರಡು ಕೂಡಿಯೇ ವಾಹನವನ್ನು ಮುನ್ನಡೆಸುತ್ತವೆ. ಮಾರ್ಗಸೂಚಿಸುವ (ದಿಶಾಸೂಚಕ) ಯಂತ್ರವಿಲ್ಲದಿದ್ದರೆ ವಾಹನವು ಎಲ್ಲಿಯಾದರೂ ಡಿಕ್ಕಿಹೊಡೆಯಬಹುದು. ಹಾಗೆಯೇ ವೇಗವರ್ಧಕ ಯಂತ್ರವಿಲ್ಲದಿದ್ದರೆ ವಾಹನವು ಚಲಿಸುವುದೇ ಇಲ್ಲ. ಅದೇ ರೀತಿ ಶ್ರದ್ಧೆ ಇಲ್ಲದಿದ್ದರೆ ಕರ್ಮ (ಕ್ರಿಯಾ) ಶಕ್ತಿ ಬರದು, ಬುದ್ಧಿ ಇಲ್ಲದಿದ್ದರೆ ಯಾವ ವಸ್ತುವಿನ ಕಡೆಗೆ ಲಕ್ಷ್ಯವಹಿಸಬೇಕೆಂಬುದೇ ತಿಳಿಯುವುದಿಲ್ಲ. ಬುದ್ಧಿಯು ಮಾರ್ಗ ತೋರಿಸುತ್ತದೆ. ಶ್ರದ್ಧೆಯು ಅದನ್ನು ಕಾರ್ಯರೂಪಕ್ಕೆ ತರುತ್ತದೆ. ಕಾರ್ಯರೂಪಕ್ಕೆ ತರುವ ಅಧಿಕಾರ ಶ್ರದ್ಧೆಯದಾದರೆ ವಿಚಾರಗಳ ಒಡೆಯ ಬುದ್ಧಿಯಾಗಿರುತ್ತದೆ. ಇವೆರಡರ ಸಹಾಯ ಸಹಕಾರಗಳಿಂದಲೇ ಜೀವನವು ಪರಿಪೂರ್ಣವಾಗುತ್ತದೆ.

ಶ್ರದ್ಧೆ ಶಕ್ತಿಶಾಲಿಯಾಗಿರುವಷ್ಟು ಬುದ್ಧಿಯು ಶಕ್ತಿಶಾಲಿಯಲ್ಲ. ಹಾಗೆಯೇ ಶ್ರದ್ಧೆಯು ದುರ್ಬಲವಾಗುವಷ್ಟು ಬುದ್ಧಿಯು ದುರ್ಬಲವಾಗುವುದಿಲ್ಲ. ಶ್ರದ್ಧೆಯು ಒಂದು ನಿರ್ದಿಷ್ಟ ಹಂತವನ್ನು ಮೀರಿ ದೂರಕ್ಕೆ ಸಾಗಲಾರದು. ಬುದ್ಧಿಯು ದೂರವನ್ನು ಕ್ರಮಿಸುತ್ತದೆ. ಅಂತೆಯೇ ಅದು ಬಲಶಾಲಿಯಾಗಿದೆ. ಇದಕ್ಕೆ ಭಿನ್ನವಾಗಿ ಶ್ರದ್ಧೆಯು ಆರಂಭದಲ್ಲಿ

ಬುದ್ಧಿಗಿಂತಲೂ ಬಲಶಾಲಿಯಾಗಿರುತ್ತದೆ. ಕೊನೆಯಲ್ಲಿ ಬುದ್ಧಿಯು ಬಲಶಾಲಿಯಾಗಿರುತ್ತದೆಯೇ ವಿನಾ ಶ್ರದ್ಧೆಯಲ್ಲ.

ನನ್ನ ದೃಷ್ಟಿಯಲ್ಲಿ ತತ್ವಶಾಸ್ತ್ರದ ಸಂಬಂಧವು ತರ್ಕ ಅಥವಾ ಬುದ್ಧಿಯ ಜೊತೆಗೆ ಇರದೇ ಭಾವನೆ, ಹೃದಯ ಮತ್ತು ಶ್ರದ್ಧೆಯ ಜೊತೆಗಿದೆ. 'ನಾಯಮಾತ್ಮಾಪ್ರವಚನೇನ ಲಭ್ಯಃ। ನ ಮೇಧಯಾ ನ ಬಹನಾ ಶ್ರುತೇನ – 'ಈ ಆತ್ಮವು ಪ್ರವಚನ, ಬುದ್ಧಿ ಮತ್ತು ಬಹುಶ್ರುತವಾಗುವಿಕೆಯಿಂದ ಲಭ್ಯವಾಗುವುದಿಲ್ಲ' ಎಂದು ಉಪನಿಷತ್ಕಾರನು ಈ ವಾಕ್ಯದಲ್ಲಿ ಸ್ಪಷ್ಟಪಡಿಸಿದ್ದಾನೆ. ಏಸುಕ್ರಿಸ್ತನ ಅನುಯಾಯಿಗಳಲ್ಲಿ ಸೌಭಾಗ್ಯದಿಂದ ವಿದ್ವಾಂಸರ ಒಂದು ವರ್ಗವೇ ಇತ್ತು. ಅವರಲ್ಲಿ ಬೆಸ್ತ, ಚಮ್ಮಾರ ಮತ್ತು ಬೆಡಿಗರೂ ಇದ್ದರು. ನರಸಿಂಹ ಮೆಹತಾನನ್ನು ವಿದ್ವತ್ ಗೋಷ್ಠಿಯಲ್ಲಿ ಕರೆದುಕೊಂಡು ಹೋದರೆ ಅಲ್ಲಿ ಅವನು ನಿರುಪಯುಕ್ತನೆನಿಸುವನು. ತತ್ವಶಾಸ್ತ್ರದ ಚರ್ಚೆಯನ್ನು ವಿದ್ವದ್ವರ್ಗ ಮಾಡುತ್ತದೆ. ಆದರೆ ಅದರ ಆಚರಣೆಯನ್ನು ಅವಿದ್ಯಾವಂತರಾಗಿದ್ದೂ ಭಾವಜೀವಿ, ಶ್ರದ್ಧಾಳುಗಳಾದ ನರಸಿಂಹ ಮೆಹತಾ ಮತ್ತು ಮೀರಾಬಾಯಿ ಮಾತ್ರ ಮಾಡಬಲ್ಲರು.

ಬುದ್ಧಿಯ ಜೊತೆಗೆ ತತ್ವಶಾಸ್ತ್ರದ ಸಂಬಂಧವಿಲ್ಲ ಹಾಗೆಂದ ಮಾತ್ರಕ್ಕೆ ಬುದ್ಧಿಯ ಅವಶ್ಯಕತೆಯೇ ಇಲ್ಲ ಅಥವಾ ಅದರ ಉಪಯೋಗವೇ ಇಲ್ಲ ಎಂದು ಇದರರ್ಥವಲ್ಲ. ಬುದ್ಧಿಯ ಉಪಯೋಗವೇ ಸಾಕಷ್ಟಿರುವಾಗ ತತ್ವಶಾಸ್ತ್ರದ ಬಗೆಗಂತೂ ಕೇಳುವುದೇ ಬೇಡ. ಸಾಮಾನ್ಯ ಕೂಲಿ ಕೆಲಸದಲ್ಲಿಯೂ ಬುದ್ಧಿಯ ಅವಶ್ಯಕತೆ ಇರುತ್ತದೆ ಮತ್ತು ಅದನ್ನು ಉಪಯೋಗಿಸಲೇ ಬೇಕಾಗುತ್ತದೆ. ಯಾವುದೋ ಒಂದು ಮನೆಯ ಸಾಧನ ಮತ್ತು ಸಾಮಗ್ರಿಗಳ ಬಗ್ಗೆ ಹೇಳುವಾಗ ನಾವು ಆ ಸಾಮಗ್ರಿಗಳಲ್ಲಿ ಆಕಾಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಆಕಾಶವು ಸರ್ವಸಾಮಾನ್ಯವಾದ ವಸ್ತುವಾಗಿದೆ. ಹಾಗೆಯೇ ಬುದ್ಧಿಯೂ ಕೂಡ ಸರ್ವಸಾಮಾನ್ಯವಾದುದು. ತತ್ವಶಾಸ್ತ್ರದ ಜೊತೆಗೆ ಬುದ್ಧಿಯ ಸಂಬಂಧವು ಸಾಮಾನ್ಯವಾಗಿದ್ದರೆ ಶ್ರದ್ಧೆಯು ತತ್ವಶಾಸ್ತ್ರದ ವಿಶಿಷ್ಟ ತತ್ವವೆನಿಸುತ್ತದೆ. ತರ್ಕ ಮತ್ತು ತತ್ವಶಾಸ್ತ್ರಗಳಿಗಿಂತಲೂ ಶ್ರದ್ಧೆ ಮತ್ತು ತತ್ವಶಾಸ್ತ್ರಗಳ ವಿಷಯು ಅತ್ಯಂತ ಅಧ್ಯಯನಯೋಗ್ಯವೆಂದು ತಿಳಿಯಲ್ಪಡುತ್ತದೆ. ಹೃತ್ಪೂರ್ವಕವಾಗಿ ತತ್ವಶಾಸ್ತ್ರವನ್ನು ಗ್ರಹಿಸಬೇಕು. ಹೃತ್ಪೂರ್ವಕವಾದಾಗಲೇ ಅದರ ಗ್ರಹಣ ಸಾಧ್ಯ. ಆದ್ದರಿಂದ ಶ್ರದ್ಧಾವಾನ್ ಲಭತೇ ಜ್ಞಾನಮ್ – ಶ್ರದ್ಧಾವಂತನೇ ಜ್ಞಾನವನ್ನು ಪಡೆಯುತ್ತಾನೆ ಎಂದು ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಹೇಳುತ್ತ ಶ್ರದ್ಧೆಯ ಜೊತೆಗೆ ಜ್ಞಾನದ ಪ್ರತ್ಯಕ್ಷ ಸಂಬಂಧವಿರುವುದನ್ನು ಸ್ಪಷ್ಟ ಪಡಿಸಿದ್ದಾನೆ. ಶ್ರದ್ಧೆ, ಸಂಯಮ ಮತ್ತು ಸಾವಧಾನಗಳು ಜ್ಞಾನಪ್ರಾಪ್ತಿಯ ಅಂತರಂಗದ ಸಾಧನಗಳಾಗಿವೆ. ಶ್ರದ್ಧಾವಂತನಿಗೆ ಮಾತ್ರ ಪುರುಷಾರ್ಥ ಸಿದ್ಧಿಸುವುದು, ಇತರರಿಗಲ್ಲ ಎಂದು ಶಂಕರಾಚಾರ್ಯರು ಹೇಳುತ್ತಾರೆ. ಪಾರಮಾರ್ಥಿಕ ತತ್ವವು ಬಹಳ ಸೂಕ್ಷ್ಮವಾಗಿದೆ. ಛಾಂದೋಗ್ಯೋಪನಿಷತ್ತಿನಲ್ಲಿ ಒಂದು ಕಥೆ ಇದೆ. ಶ್ವೇತಕೇತುವನ್ನು ಅವನ ತಂದೆಯು ಕರೆದು – 'ಮಗನೆ, ಎದುರಿಗಿರುವ ಅರಳಿವೃಕ್ಷದ ಹಣ್ಣು ತೆಗೆದುಕೊಂಡು ಬಾ' ಎಂದು ಹೇಳುತ್ತಾನೆ. ಮಗನು ಹಣ್ಣು ತಂದ ಮೇಲೆ ಅದನ್ನು ತುಂಡಾಗಿಸಲು ತಂದೆ ಹೇಳುತ್ತಾನೆ. ಶ್ವೇತಕೇತು ಅದನ್ನು ತುಂಡು ತುಂಡು ಮಾಡಿದ ಮೇಲೆ ಇದರೊಳಗೆ ನಿನಗೇನು ಕಾಣುತ್ತದೆ ಎಂದು ತಂದೆ ಪ್ರಶ್ನಿಸುತ್ತಾನೆ. ಬೀಜ ಕಾಣುತ್ತದೆ ಎಂದು ಶ್ವೇತಕೇತು ಉತ್ತರಿಸಿದಾಗ ತಂದೆಯು ಅದನ್ನೂ ತುಂಡಾಗಿಸಲು ಹೇಳುತ್ತಾನೆ. ಮಗನು ಬೀಜವನ್ನು

ತುಂಡರಿಸಿದಾಗ ತಂದೆಯು ಈಗ ಅದರಲ್ಲಿ ಏನು ಕಾಣುತ್ತಿದೆ ಎಂದು ಕೇಳುತ್ತಾನೆ. ಆಗ ಶ್ವೇತಕೇತುವು ಏನೂ ಕಾಣುವುದಿಲ್ಲ ಎನ್ನುತ್ತಾನೆ. ಆಗ – ಈ ಏನೂ ಇಲ್ಲ ಎನ್ನುವುದು ಇದೆಯಲ್ಲ ಅದರೊಳಗಿಂದಲೇ ಈ ವಿಶಾಲವಾದ ಅರಳಿವೃಕ್ಷ ಹುಟ್ಟಿದೆ ಎಂದು ತಂದೆಯು ಹೇಳುತ್ತ ಆತ್ಮತತ್ವವೂ ಅತ್ಯಂತ ಸೂಕ್ಷ್ಮವಾಗಿದೆ. ಅದರಿಂದಲೇ ಈ ವಿಶ್ವದ ಸೃಷ್ಟಿಯಾಗಿದೆ – ಆದ್ದರಿಂದ ಮಗನೆ! ಶ್ರದ್ಧೆಯನ್ನಿಡು! ಶ್ರದ್ಧತ್ಸ್ವ!

ಶ್ರುತ್ವಾ ಅನ್ಯೇಭ್ಯಃ ಉಪಾಸತೇ!– ಇನ್ನೊಬ್ಬರಿಂದ ಕೇಳಿ ಉಪಾಸನೆ ಮಾಡುವವನಿಗೆ ಶ್ರುತಿಪರಾಯಣನೆಂದು ಗೀತೆ ಹೇಳುತ್ತದೆ. ಶ್ರುತಿಪರಾಯಣ ಎಂದರೆ ಶ್ರದ್ಧಾಪರಾಯಣ. ಗುರುವಿನಿಂದ ಶ್ರವಣ ಮಾಡಿದವನು. ಅದರಲ್ಲಿ ಶ್ರದ್ಧೆ ಇಡುವುದು ಮತ್ತು ಯಾವ ರೀತಿಯಲ್ಲೂ ವಿಚಲಿತನಾಗದೆ ಅದರಂತೆಯೇ ವರ್ತಿಸುವುದು. ಆ ಪ್ರಯತ್ನದಲ್ಲಿ ತಪ್ಪು ತಡೆ ಉಂಟಾಗಬಹುದು ಆದರೆ ಪ್ರಯತ್ನ ಬಿಡುವಂತಿಲ್ಲ. ಪ್ರಯತ್ನವೇ ಶ್ರದ್ಧೆಗೆ ಇರುವ ಪ್ರಮಾಣ. ಆಚರಣೆಯು ಪೂರ್ಣಗೊಂಡರೆ ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತದೆ.

ಋಗ್ವೇದದಲ್ಲಿ ಶ್ರದ್ಧಾಸೂಕ್ತವೊಂದಿದೆ. ಅದರಲ್ಲಿ ಋಷಿಯು ಶ್ರದ್ಧಾಂ ಭಗಸ್ಯ ಮೂರ್ಧನಿ – ನಾವು ಶ್ರದ್ಧೆಯನ್ನು ಭಗವಂತನ ತಲೆಯ ಮೇಲಿಡುತ್ತೇವೆ. ಮತ್ತೆ ಮುಂದೆ ಹೇಳುವುದೇನೆಂದರೆ–

ಶ್ರದ್ಧಾಂ ಪ್ರಾತರ್ಹವಾಮಹೇ ಶ್ರದ್ಧಾಂ ಮಧ್ಯಂದಿನಂ ಪರಿ।
ಶ್ರದ್ಧಾ ಸೂರ್ಯಸ್ಯ ನಿಮ್ರುಚಿ ಶ್ರದ್ಧೆ ಶ್ರದ್ಧಾಪಯೇಹ ನಃ?

ನಾವು ಪ್ರಾತಃಕಾಲದಲ್ಲಿ ಶ್ರದ್ಧೆಯ ಆವಾಹನ ಮಾಡುತ್ತೇವೆ ಮತ್ತು ಮಧ್ಯಾಹ್ನ ಶ್ರದ್ಧೆಯ ಆವಾಹನ ಮಾಡುತ್ತೇವೆ. ಸೂರ್ಯಾಸ್ತದ ಸಮಯದಲ್ಲಿಯೂ ನಾವು ಅದೇ ಶ್ರದ್ಧೆಯ ಆವಾಹನ ಮಾಡುತ್ತೇವೆ. ಹೇ ಶ್ರದ್ಧೆಯೇ! ಶ್ರದ್ಧಾದೇವಿ! ನಮ್ಮ ಶ್ರದ್ಧೆಯನ್ನು ಬಲಗೊಳಿಸು.?

ಸಮತೆಯಿಂದ ಸುರಕ್ಷಣೆ

ನೀರಿನಲ್ಲಿ, ಸೂರ್ಯನಾರಾಯಣನಲ್ಲಿ ಮತ್ತು ತಕ್ಕಡಿಯಲ್ಲಿ ಇರುವಂಥ ಸಮಾನತೆಯೇ ನಮ್ಮ ಜೀವನದಲ್ಲಿ ಬರಬೇಕು. ಭಗವಂತನಿಗೆ ಎಲ್ಲರ ಮೇಲೆ ಸಮಾನ ಪ್ರೇಮ. ಸೃಷ್ಟಿಯಲ್ಲಿನ ನೀರು ಸಮತ್ವದಿಂದ ಇರುತ್ತದೆ. ಅದು ಹಸು–ಸಿಂಹಗಳಲ್ಲಿ ಭೇದ ಮಾಡುವುದಿಲ್ಲ. ಸೂರ್ಯ ಹರಿಜನರ ಮನೆಗೂ ಪ್ರವೇಶಿಸುತ್ತಾನೆ. ಅಂತೆಯೇ ಬ್ರಾಹ್ಮಣನ ಮನೆಗೂ ಬಡವನ ಗುಡಿಸಲಿಗೂ ಹೋಗುತ್ತಾನೆ. ಸಿರಿವಂತನ ಮಹಲಿಗೂ ಹೋಗುತ್ತಾನೆ. ಆತ ಭೇದ–ಭಾವ ಎಣಿಸದೆ ಎಲ್ಲರೊಡನೆ ಸಮಾನವಾಗಿ ವರ್ತಿಸುತ್ತಾನೆ. ನಾಳೆ ಆತ ಒಬ್ಬನ ಮನೆಗೆ ಹೆಚ್ಚು ಇನ್ನೊಬ್ಬನ ಮನೆಗೆ ಕಡಿಮೆ ಹೋದುದಾದರೆ ಜಗತ್ತೇ ನಾಶವಾದೀತು. ಸೂರ್ಯ ಚಂದ್ರರನ್ನು ಸೃಷ್ಟಿಮಾಡಿದ ದೇವರೇ ತಕ್ಕಡಿಯನ್ನೂ ಸೃಷ್ಟಿಸಿದ. ಸಮಸ್ತ ಜಗತ್ತಿನ ವ್ಯಾಪಾರ ವ್ಯವಹಾರ ತಕ್ಕಡಿಯಿಂದ ನಡೆಯುತ್ತದೆ. ತಕ್ಕಡಿಯೆಂದರೆ ಸಮತೆ. ಎಲ್ಲ ವ್ಯವಹಾರದ ಮೂಲದಲ್ಲಿ ಸಮತ್ವವುಂಟು. ಬಡವ ಮತ್ತು ಬಲ್ಲವರಿಬ್ಬರೂ ಬತ್ತಲೆಯಾಗಿ ಬಂದರು. ಬತ್ತಲೆಯಾಗಿಯೇ ಹೋಗುತ್ತಾರೆ. ಈಶ್ವರನ ಜಗತ್ತಿನಲ್ಲಿಯಾದರೂ ಏನೂ ಕೆಡದಂಥ ಸಮತೆಯ ಕಾನೂನುಂಟು. ಸಮಾನತೆ ಇರುವೆಡೆ ಸುರಕ್ಷಿತ ಶಾಂತಿ. – ವಿನೋಬಾ

ಸರ್ವೋದಯ ಆಂದೋಲನದ ಮುನ್ನಡೆ


ಇತ್ತೀಚೆಗೆ ತಾನೆ ರಚನೆಗೊಂಡ ಹಾಸನ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿ ಅಕ್ಟೋಬರ್ ೨, ಗಾಂಧೀ ಜಯಂತಿಯನ್ನು ಸಾರ್ವಜನಿಕವಾಗಿ ಸಂಘಟಿಸುವುದರ ಮೂಲಕ ತನ್ನ ಸಾರ್ವಜನಿಕ ಕಾರ್ಯವನ್ನು ಪ್ರಾರಂಭಿಸಿತು. ಜಯಂತಿಯ ಕಾರ್ಯಕ್ರಮದಲ್ಲಿ ಮಿತ್ರಮಂಡಲಿಯ ಸದಸ್ಯರೆಲ್ಲರೂ ಹಾಜರಿದ್ದುದು ವಿಶೇಷ ಸಂಗತಿಯಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಮಿತ್ರ ಮಂಡಲಿಯ ಅಧ್ಯಕ್ಷರಾದ ಶ್ರೀ.ಹೆಚ್.ಆರ್.ಮಂಜಪ್ಪಗೌಡರುವಹಿಸಿದ್ದರು. ಸಭೆಯಲ್ಲಿ ಹಾಜರಿದ್ದ ಕೆಲವು ಸದಸ್ಯರು ಗಾಂಧೀಜಿಯವರ ವಿಚಾರಗಳ ಪ್ರಸ್ತುತತೆ ಕುರಿತು ಮಾತನಾಡಿದರು. ಸಭೆಯ ಮುನ್ನ ಕಾರ್ಯದರ್ಶಿ ಅನುಗನಾಡು ಕೃಷ್ಣಮೂರ್ತಿ ಎಲ್ಲರನ್ನು ಸ್ವಾಗತಿಸಿದರು. ಸಭೆಯ ಕೊನೆಯಲ್ಲಿ ಖಜಾಂಚಿ ಸುರೇಶ್ ಗುರೂಜಿ ವಂದನಾರ್ಪಣೆಮಾಡಿದರು. ತಾಲ್ಲೂಕು ಮಟ್ಟದಲ್ಲಿಯೂ ಸರ್ವೋದಯ ಆಂದೋಲನದ ಸಂಘಟನೆಮಾಡಲು ಪ್ರಯತ್ನಿಸಬೇಕೆಂದು ತೀರ್ಮಾನಿಸಲಾಯಿತು.

******

• ತುಮಕೂರು ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯು ಮಧುಗಿರಿ ತಾಲ್ಲೂಕಿನ ಕಾರಾಗೃಹದಲ್ಲಿರುವ ವಿಚಾರಾಧೀನ ಸಹೋದರರಿಗಾಗಿ "ಜೈಲಿನಲ್ಲಿ ಗಾಂಧೀಜಿಯವರ ಜೀವನ" ಎಂಬ ವಿಷಯವಾಗಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಉಪನ್ಯಾಸದಿಂದ ಪ್ರಭಾವಿತರಾದ ಖೈದಿಗಳಲ್ಲಿ ಸುಮಾರು ೨೦ಮಂದಿ ಗಾಂಧೀ ಜೀವನ ಚರಿತ್ರೆ ಪುಸ್ತಕ ತಮಗೆ ಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು. ಅನೇಕ ಪ್ರಶ್ನೆಗಳ ಮೂಲಕ ಹೆಚ್ಚಿನ ವಿವರಗಳನ್ನು ತಿಳಿಯಲು ಅವರು ಪ್ರಯತ್ನಿಸಿದರು. ಉಪನ್ಯಾಸವನ್ನು ರಾಜ್ಯ ಸರ್ವೋದಯ ಮಂಡಲಿಯ ಕಾರ್ಯದರ್ಶಿ ಎಲ್.ನರಸಿಂಹಯ್ಯನವರು ನಡೆಸಿಕೊಟ್ಟರು.

ಹೊಸದಾಗಿ ರಚಿತವಾಗಿರುವ ಗ್ರಾಮ ಪಂಚಾಯಿತ್ತಿಗಳ ಸದಸ್ಯರಿಗೆ ನಮ್ಮ ರಾಜ್ಯಾಂಗದ ಆಶಯ ಹಾಗೂ ನಮ್ಮ ನಾಯಕರ ಆಶಯಗಳ ಪರಿಚಯಮಾಡಿಕೊಡುವ ಮತ್ತು ಆ ಆಶಯಗಳ ನೆರವೇರುವಿಕೆಯಲ್ಲಿ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ತಿಳಿಸುವ ಕಾರ್ಯಾಗಾರವೊಂದನ್ನು ಮಧುಗಿರಿಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ಸದಸ್ಯರು ಉತ್ಸಾಹದಿಂದ ಭಾಗವಹಿಸಿದರು. ಈ ಕಾರ್ಯಾಗಾರದಿಂದ ತಾವು ಅನೇಕ ಹೊಸ ವಿಷಯಗಳನ್ನು ತಿಳಿದುದಾಗಿ ಹೇಳಿದರು. ಬೇರೆ ತಾಲ್ಲೂಕುಗಳಲ್ಲಿಯೂ ಇಂಥ ಕಾರ್ಯಾಗಾರ ನಡೆಯಬೇಕೆಂಬ ಅಭಿಪ್ರಾಯ ಮೂಡಿಬಂತು. ಈ ಕಾರ್ಯಾಗಾರವನ್ನು ನಡೆಸಲು ಸರ್ವೋದಯ ಮಂಡಲಿಯ ಜೊತೆಗೆ ತಾಲ್ಲೂಕು ಪಂಚಾಯತ್ ಸಮಿತಿ ಕೈ ಜೋಡಿಸಿತು. ಕಾರ್ಯಾಗಾರದಲ್ಲಿ ಶ್ರೀಮತಿ.ಸುಚಿತ್ರ ಮತ್ತು ಶ್ರೀ.ಮಲ್ಲೇಶಪ್ಪನವರು ಹಾಜರಿದ್ದರು. ಇವರು ಕಾರ್ಯಾಗಾರದ ಸಂಯೋಜಕರಾಗಿ ಕಾರ್ಯನಿರ್ವಹಿಸಿದರು.

ಖಾದಿ ವಿಚಾರ



(ಇತ್ತೀಚೆಗೆ ಮಹಾರಾಷ್ಟ್ರದಜಳಗಾಂನಲ್ಲಿ ನಡೆದ ಖಾದಿ – ಗ್ರಾಮೋದ್ಯೋಗ ಉಳಿಸಿ ಸಮ್ಮೇಳನದ ಅನುಭವ)

ಕೇವಲ ಕನ್ನಡ ಭಾಷೆ ಮಾತ್ರ ತಿಳಿದ ನನಗೆ ಹೊಸ ಪ್ರದೇಶದಲ್ಲಿ ನಡೆಯುವ ಗೋಷ್ಠಿಯ ಬಗ್ಗೆ ಏನು ತಾನೆ ಹೇಳಲು ಸಾಧ್ಯ. ಹಾಗೆ ಹೇಳಲೇ ಬೇಕೆಂದರೆ ನಾನು ಅರ್ಥೈಸಿಕೊಂಡಷ್ಟು ಮಾತ್ರ ತಿಳಿಸಲು ಇಚ್ಛಿಸುತ್ತೇನೆ.

ದೇಶದ ಮಟ್ಟದಲ್ಲಿ ಖಾದಿ ಗ್ರಾಮೋದ್ಯೋಗ ಉಳಿಸಿ ವಿಚಾರ ಗೋಷ್ಠಿ ನಡೆಯುತ್ತೆ ಅಂದರೆ ಎಷ್ಟು ನೇತಾರರು ಸೇರಬೇಕು? ಕೇವಲ ಬೆರಳೆಣಿಕೆಯಷ್ಟು ಮಂದಿ ನೇತಾರರು! ಅದೂ ೫೦ ರಿಂದ ೬೦ ವರ್ಷ ಮೇಲ್ಪಟ್ಟವರು. ಕೇವಲ ೬ ಮಂದಿ ಮಾತ್ರ ಯುವಕರು. ಅಷ್ಟು ಜನರಲ್ಲೂ ಅರ್ಧದಷ್ಟು ಇತರೆ ಸಂಘ ಸಂಸ್ಥೆಯವರೇ ಇದ್ದರು.

ನನಗೆ ಆವಾಗ ಯೋಚನೆ ಶುರುವಾಯ್ತು! ನಾವು ಮೇಲುಕೋಟೆಯಲ್ಲಿ ಮಾತ್ರ ಈ ಸಮಸ್ಯೆಯನ್ನು ಎದುರಿಸುತ್ತಾ ಇದ್ದೇವೆ ಅಂದುಕೊಂಡಿದ್ವೀ. ಆದರೆ ಅಲ್ಲಿ ಭಾಗವಹಿಸಿದ್ದ ಅಷ್ಟೂ ಮಂದಿ ತಮ್ಮ ಕುಟುಂಬಗಳಿಂದ ತಮ್ಮ ಮಕ್ಕಳನ್ನು, ತಮ್ಮ ನೆರೆಹೊರೆಯವರನ್ನು ಕರೆದು ತರುವಲ್ಲಿ ವಿಫಲರಾಗಿದ್ದರು. ಅಲ್ಲಿ ಸೇರಿದ್ದವರಲ್ಲಿ ಕೆಲವು ಮಂದಿಯಂತೂ ಖಾದಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ತುಂಬ ಕೆಲಸಮಾಡಿದ್ದರು. ಅದು ತುಂಬ ಪ್ರೇರಕವಾಗಿತ್ತು.

ಖಾದಿಯು ಜೀವನದ ಬದುಕುವ ಶೈಲಿ. ಅದು ಹಳೆಯದಾದರೂ ಅದಕ್ಕೆ ಹೊಸ ದೃಷ್ಟಿಕೋನ ಕೊಟ್ಟು ಹೊಸ ರೀತಿಯಲ್ಲಿ ನೋಡಿದರೆ ಅದಕ್ಕೆ ಹೊಸ ತಿರುವು ಕೊಟ್ಟಂತಾಗುತ್ತದೆ. ಆಗ ಖಾದಿಯ ವಿಚಾರಧಾರೆ ಎಲ್ಲರಲ್ಲಿ ಹರಿಯುತ್ತದೆ. ನಂತರ ಅರಿತು ನಡೆಯಬಹುದು.

ಆಗಮಿಸಿದವರೆಲ್ಲ ಖಾದಿ ಕ್ಷೇತ್ರದಲ್ಲಿ ಹಾಗೂ ಗಾಂಧಿ ವಿಚಾರಗಳಲ್ಲಿ ಬಹಳ ಅನುಭವ ಪಡೆದಂಥವರಿದ್ದರು. ಆದರೆ ಅದರಲ್ಲಿ ಕುಶಲತೆ ಮತ್ತು ನೂತನತೆಯನ್ನು

ಕೊಡುವುದರಲ್ಲಿ ವಿಫಲ ಹೊಂದಿದ್ದರೆಂದು ಹೇಳಬಹುದೇನೊ.

ಯುವಜನತೆ ಖಾದಿಯನ್ನು ಅರ್ಥಮಾಡಿಕೊಂಡಿರುವ ಪರಿಯೇ ವಿಚಿತ್ರವಾದಂಥದ್ದು. ಕೇವಲ ನೇಕಾರ ಜನಾಂಗದವರೇ ಮಾಡುವ ಕೆಲಸ ನೇಯ್ಗೆ. ಅದನ್ನು ಇತರರು ಮಾಡುವುದು ಅಕ್ಷಮ್ಯ ಅಪರಾಧವೆಂದೇ ಭಾವಿಸಿದ್ದಾರೆ.

ಸುಮನಸ್ ಕೌಲಗಿ ತಾವು ತಿಳಿದುಕೊಂಡಿದ್ದ ಹಾಗೂ ಅರ್ಥೈಸಿ ನಡೆಯುತ್ತಿರುವ ಖಾದಿಯ ಪರಿಯ ಬಗ್ಗೆ ಮತ್ತು ಮೇಲುಕೋಟೆಯಲ್ಲಿ ನಿರ್ವಹಿಸುತ್ತಿರುವ ಕಾರ್ಯದ ಬಗ್ಗೆ ಸಾಕ್ಷ್ಯಚಿತ್ರದ ಮೂಲಕ ವಿವರಿಸಿದಾಗ ಎಲ್ಲರೂ ಸಂತೋಷಗೊಂಡರು. ಗೋಷ್ಠಿಯಲ್ಲಿ ಎಲ್ಲರೂ ಏನು ಮಾಡಿದರೆ ಖಾದಿಗೆ ಹೊಸ ರೂಪ ಕೊಡಬಹುದೆಂದು ಯೋಚಿಸುತ್ತಿರುವುದು ಹೊಸ ವಿಷಯ. ಸಾಕ್ಷ್ಯಚಿತ್ರವನ್ನು ವೀಕ್ಷಿಸಿದ ಪ್ರತಿಯೊಬ್ಬರು ಅದರಿಂದ ಪ್ರಭಾವಿತರಾದರು. ಎಲ್ಲರೂ ಸುಮನಸ್ ಅವರನ್ನು ಭೇಟಿಮಾಡಿ ಚರ್ಚಿಸಿದರು. ಆಗ ನನಗಂತು ತುಂಬ ಖುಷಿಯಾಯಿತು. ನಾವು ಹೋಗುತ್ತಿರುವ ದಾರಿ ಸರಿಯಾಗಿದೆ ಎಂದು ನನಗೆ ಅನಿಸಿತು. ಗೋಷ್ಠಿಯಲ್ಲಿ ಮುಖ್ಯ ಅತಿಥಿ ಗಣ್ಯರಲ್ಲಿ ಗಾಂಧಿಯವರ ಮೊಮ್ಮಗಳಾದ ಶ್ರೀಮತಿ.ಇಳಾಗಾಂಧಿ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ.ರಾಧಾ ಭಟ್, ಸರ್ವಸೇವಾ ಸಂಘದಲ್ಲಿ ಉನ್ನತ ಸ್ಥಾನದಲ್ಲಿರುವ ಹಿರಿಯರಾದ ರಾಜನಾಥಸಿಂಗ್, ಜಯವಂತ್ ಮಠಕರ್ ಹಾಗೂ ಇನ್ನಿತರ ಗಣ್ಯರು ಆಗಮಿಸಿದ್ದರು. ಇಂಥ ಗಣ್ಯರನ್ನು ಭೇಟಿಮಾಡಿದ್ದು ನನಗೆ ಸದಾ ನೆನಪಿರುವ ಸಂಗತಿಯಾಯಿತು.

– **ಅಶೋಕ್**

(ಟ್ರಸ್ಟಿನಲ್ಲಿ ಖಾದಿ ಕೆಲಸ ಕಲಿಯುತ್ತಿರುವ
ಪದವೀಧರ ಸ್ವಯಂಸೇವಕ)

ಜನಪದ ನಿಲಯದ ಅಂತರಂಗದಲ್ಲಿ – ೧೩೯



ಮಂಡ್ಯ ಜಿಲ್ಲೆಯ ಮೇಲುಕೋಟೆಯಿಂದ ಶಿವಮೊಗ್ಗ ಜಿಲ್ಲೆಯ ಹಳೆಯ ಹೆಗ್ಗೋಡು ಗ್ರಾಮ ಸುಮಾರು ೨೫೦ ಮೈಲಿಗಳಷ್ಟು ದೂರ. ಆ ಗ್ರಾಮದಲ್ಲಿ ಕಳೆದ ಅಕ್ಟೋಬರ್ ೧೧ರಿಂದ೧೪ರವರೆಗೆ ಮಕ್ಕಳ ಶಿಬಿರವೊಂದು ನಡೆಯಿತು. ಆ ಶಿಬಿರದಲ್ಲಿ ಸುಮಾರು ೫೦ ಮಕ್ಕಳು ಭಾಗವಹಿಸಿದ್ದರು. ಗ್ರಾಮಸ್ಥರೂ ಕೂಡ ಶಿಬಿರದ ಯಶಸ್ಸಿಗೆ ಬಹಳಷ್ಟು ಸಹಕಾರ ನೀಡಿದರು. ಹೆಗ್ಗೋಡಿನಲ್ಲಿರುವ ಕೆ.ವಿ.ಸುಬ್ಬಣ್ಣನವರ ನೀನಾಸಮ್ ಸಂಸ್ಥೆ. ಈ ಶಿಬಿರಕ್ಕೆ ಪರೋಕ್ಷವಾಗಿ ಪ್ರೇರಣೆಕೊಟ್ಟಂಥ ಕಲಾ ತೀರ್ಥಕ್ಷೇತ್ರ. ಅಲ್ಲಿ ನಡೆದ ಸಂಸ್ಕೃತಿ ಶಿಬಿರದಲ್ಲಿ ಭಾಗವಹಿಸಲು ಬಂದಿದ್ದ ಕವಿಗಳಾದ ಜಯಂತ್ ಕಾಯ್ಕಿಣಿ ಮತ್ತು ಲಕ್ಷ್ಮೀಶ ತೋಲ್ಪಾಡಿಯವರು ಹಳೆಯ ಹೆಗ್ಗೋಡಿಗೆ ಬಂದು ಮಕ್ಕಳ ಶಿಬಿರವನ್ನು ಉದ್ಘಾಟಿಸಿದರು. ಶಿಬಿರದಲ್ಲಿ ಮಕ್ಕಳನ್ನು ವಿವಿಧ ಪ್ರಕಾರದ ಸಾಮೂಹಿಕ ಆಟಗಳಲ್ಲಿ ತೊಡಗಿಸಲಾಯಿತು. ಸಂಜೆ ವಿವಿಧ ವಿಷಯಗಳನ್ನು ಕುರಿತಾದ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಯಿತು. ಸಾಕ್ಷ್ಯಚಿತ್ರಗಳಲ್ಲಿ ಕೆಲವು ಪರಿಸರಕ್ಕೆ ಸಂಬಂಧಿಸಿದ್ದವಾದರೆ ಇನ್ನು ಕೆಲವು ಸರಳ ಜೀವನದ ಮಹತ್ವವನ್ನು ತಿಳಿಸುವಂಥದಾಗಿದ್ದವು. ಮಕ್ಕಳು ಮತ್ತು ದೊಡ್ಡವರಾದಿಯಾಗಿ ಎಲ್ಲರೂ ಆ ಸಾಕ್ಷ್ಯಚಿತ್ರಗಳಿಂದ ಪ್ರಭಾವಿತರಾದರು. ಅಲ್ಲಿಯ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ.ಹೆಗಡೆ ಅವರು ಶಿಬಿರದ ಕಾರ್ಯಕಲಾಪಗಳಲ್ಲಿ ವಿಶೇಷ ಆಸಕ್ತಿ ತೋರಿಸಿದರಲ್ಲದೆ ತುಂಬ ಸಹಕಾರವನ್ನು ಕೊಟ್ಟರು. ಶಿಬಿರದ ಆಟ – ಪಾಠಗಳಿಗೆ ಶಾಲಾ ಕ್ರೀಡಾಂಗಣವನ್ನು ಉಪಯೋಗಿಸಲು ಅವಕಾಶಕೊಟ್ಟರಲ್ಲದೆ ಶಿಬಿರಾರ್ಥಿಗಳ ಉಟೋಪಚಾರಗಳ ವ್ಯವಸ್ಥೆಗೆ ಶಾಲೆಯಲ್ಲಿರುವ ಸೌಕರ್ಯಗಳನ್ನು ಉಪಯೋಗಿಸಲು ಅನುವು ಮಾಡಿಕೊಟ್ಟರು. ಶಿಬಿರದ ಮಾರ್ಗದರ್ಶಕರಾಗಿ ಮತ್ತು ಮೇಲ್ವಿಚಾರಕರಾಗಿ ಸುಘೋಷ್ ಕೌಲಗಿಯವರು ಕಾರ್ಯನಿರ್ವಹಿಸಿದರು. ಅವರ ಸಹಾಯಕ್ಕೆ ಬೆಂಬಲಿಗರಾಗಿ ಶಬೀರ್ ಖಾನ್, ಸುರೇಶ್, ರವಿ, ಶರತ್, ಸುಮನಸ್ ಕೌಲಗಿ, ಗಿರೀಶ್, ಸುಮನ್, ಸಂಗಮೇಶ ಮುಂತಾದ ಯುವಕರು ಹೋಗಿದ್ದರು.

ಈ ಶಿಬಿರದ ವಿಷಯವನ್ನು ಜನಪದ ನಿಲಯದ ಅಂತರಂಗದಲ್ಲಿ ಪ್ರಸ್ತಾಪಿಸಲು ಕಾರಣವೇನೆಂದರೆ ಆ ಶಿಬಿರದ ಕಾರ್ಯಕ್ರಮಕ್ಕೆ ಕಾರಣರಾದವರು ಜನಪದ ಸೇವಾ

ಟ್ರಸ್ಟಿನ ವಿಚಾರದಿಂದ ಮತ್ತು ಕಾರ್ಯಚಟುವಟಿಕೆಗಳಿಂದ ಪ್ರಭಾವಿತರಾದ ವ್ಯಕ್ತಿಗಳೇ ಎಂಬ ಕಾರಣಕ್ಕಾಗಿ. ಆ ಶಿಬಿರ ಒಂದು ಅರ್ಥದಲ್ಲಿ ಜನಪದ ಸೇವಾ ಟ್ರಸ್ಟಿನ ವಿಸ್ತೃತ ಕಾರ್ಯಕ್ರಮವೇ ಆಗಿತ್ತು. ಸುಘೋಷ್ ಕೌಲಗಿ ಜನಪದ ಸೇವಾ ಟ್ರಸ್ಟಿನಲ್ಲಿ ಹುಟ್ಟಿ ಬೆಳೆದ ಯುವಕ. ಸುಮನಸ್ ಕೌಲಗಿ ಟ್ರಸ್ಟಿನ ಸೇವಾ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಮೂರನೇ ತಲೆಮಾರಿನ ಹುಡುಗ. ಶಬೀರ್ ಖಾನ್, ಶರತ್, ಗಿರೀಶ್, ಸುರೇಶ್ ಟ್ರಸ್ಟಿನ ವಿದ್ಯಾರ್ಥಿಗಳಾಗಿ ಅದರ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡವರು. ಈ ಮೊದಲು ಇಂಥದೇ ಒಂದು ಕಾರ್ಯಕ್ರಮವನ್ನು ನೇದರವಳ್ಳಿ ಎಂಬ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಜನಪದ ಸೇವಾ ಟ್ರಸ್ಟಿನಿಂದ ಇಂಥ ವಿಸ್ತರಣಾ ಕಾರ್ಯಕ್ರಮಗಳು ಟ್ರಸ್ಟಿನ ೫೫ನೇ ವರ್ಷದ ಕಾಲಾವಧಿಯಲ್ಲಿ ನಡೆಯುತ್ತಿರುವುದು ಅಭಿಮಾನದ ಸಂಗತಿಯಾಗಿದೆ. ಇಂಥ ಮಹತ್ವದ ಹೆಜ್ಜೆಯಿಡಲು ಸಾಧ್ಯವಾಗುವಂತೆ ಮಾಡಿದ ಶ್ರೇಯಸ್ಸು ಜನಪದ ಸೇವಾ ಟ್ರಸ್ಟನ್ನು ಬೆಳೆಸಿದ ಎಲ್ಲ ದಾನಿಗಳಿಗೆ ಅಭಿಮಾನಿಗಳಿಗೆ ಮತ್ತು ಕಾರ್ಯಕರ್ತರಿಗೆ ಸಲ್ಲುತ್ತದೆ.

ಸನ್ಮಾನ್ಯರಿಂದ

ಬಾಪು ಹೆದ್ದೂರಶೆಟ್ಟಿ ರವರ ವಿಚಾರಕ್ಕೆ ಪ್ರತಿಕ್ರಿಯೆ

ಸುರೇಂದ್ರ ಕೌಲಗಿಯವರ 'ನಗರೀಕರಣ ವಿರುದ್ಧ ಗ್ರಾಮೀಣೀಕರಣ' ಲೇಖನಕ್ಕೆ (ಸೆಪ್ಟೆಂಬರ್ ೨೦೧೫) ಬಾಪು ಹೆದ್ದೂರ ಶೆಟ್ಟಿಯವರು ಬರೆದ ಪ್ರತಿಕ್ರಿಯೆ (ಅಕ್ಟೋಬರ್ ೨೦೧೫) ಚರ್ಚಾಸ್ಪದವಾಗಿದೆ. ಬ್ರಿಟೀಷರಿಂದ ಸ್ವತಂತ್ರಗೊಂಡ ಭಾರತ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯನ್ನು ಗಾಳಿಗೆ ತೂರಿದ ಪರಿಣಾಮವಾಗಿ ಮೇಲ್ನೋಟಕ್ಕೆ ಭೌತಕ ಪ್ರಗತಿಯನ್ನು ಕಂಡರೂ ನೈತಿಕವಾಗಿ ಕುಸಿದು ಹೋಗಿರುವುದರ ಪರಿಸ್ಥಿತಿಯಿಂದಾಗಿ ಭ್ರಷ್ಟಾಚಾರ ಭುಗಿಲೆದ್ದು ಸಾಮಾಜಿಕ ಬದುಕು ಉಸಿರುಗಟ್ಟುವಂತಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಆಹಾರದ ಕೊರತೆ, ಆರೋಗ್ಯದ ಕೊರತೆ, ಶಿಕ್ಷಣದ ಕೊರತೆ, ಸಾರಿಗೆ ಸಂಪರ್ಕಗಳ ಕೊರತೆ ಪ್ರಧಾನವಾಗಿತ್ತು. ಸ್ವಾತಂತ್ರ್ಯಾನಂತರ ಈ ಎಲ್ಲ ಕೊರತೆಗ್ಳು ನೀಗಿ ಜನಪರವಾಗಬೇಕಾಗಿದ್ದವು ಶೋಷಣೆಯ ತಾಣಗಳಾಗಿರುವುದು ಕಣ್ಣ ಮುಂದಿದೆ.

ಆಹಾರ ಸಮಾನವಾಗಿ ಹಂಚಿಕೆಯಾಗದೆ. ಬಡತನದಲ್ಲಿ ಬಹುಜನರು ಬೇಯುತ್ತಿದ್ದಾರೆ. ಆಹಾರದ ಕಲಬೆರಕೆ ಉಸಿರಿನಷ್ಟು ಸಹಜವಾಗಿದೆ. ಆರೋಗ್ಯ ಕೈಗೆಟುಕದೆ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಸುಲಿಗೆಯ ಕೇಂದ್ರಗಳಾಗಿ ನರಕಸದೃಶವಾಗುತ್ತಿವೆ. ಶಿಕ್ಷಣ ಹಣದ ದಂಧೆಯಾಗಿ ಪರಿಣಮಿಸಿ ಜನಸಾಮಾನ್ಯರ ಪಾಲಿಗೆ ಯಮಯಾತನೆಯಾಗಿ ಪರಿಣಮಿಸಿದೆ. ದಿನನಿತ್ಯದ ವಸ್ತುಗಳ ಬೆಲೆ ಗಗನಮುಖಿಯಾಗುತ್ತಿದೆ. ನಗರೀಕರಣದ ಫಲವಾಗಿ ಮಾನವೀಯತೆ ಮುರುಟಿ ಪರಸ್ಪರ ಸುಲಿವ, ವಂಚಿಸುವ ಅಮಾನವೀಯ ಪ್ರವೃತ್ತಿ ಎಲ್ಲರ ಮನಸ್ಸನ್ನು ಆಕ್ರಮಿಸಿಕೊಳ್ಳುತ್ತಿದೆ. ಶುದ್ಧ ಸ್ವಾಭಿಮಾನದ ಬದುಕು ಶೂನ್ಯವಾಗುತ್ತಿದೆ.

ನಿಜ. ಜನಸಂಖ್ಯೆಗೆ ಅನುಗುಣವಾಗಿ ಕೃಷಿಭೂಮಿ ವಿಸ್ತರಿಸಿ ಉತ್ಪಾದನೆ ಹೆಚ್ಚಿದೆ. ಆದರೆ ಜನರ ಬದುಕು ದುಸ್ತರವಾಗುತ್ತಿದೆ. ನಗರಗಳು ನಗರಗಳಾಗಿ ಉಳಿದಿಲ್ಲ. ಅವು ನರಕ ಸದೃಶವಾಗುತ್ತಿವೆ. ಮನುಷ್ಯ ಕನಿಷ್ಠ ಗೌರವಯುತವಾಗಿ ಬದುಕುವ ಯಾವ ಲಕ್ಷಣಗಳೂ ಅಲ್ಲಿ ಕಾಣುತ್ತಿಲ್ಲ. ಜನ ಕಂಡರೆ ಜನ ಹೆದರಿ ಪ್ರತಿಯೊಬ್ಬರೂ ಉಸಿರುಗಟ್ಟಿ ಭಯದ ನೆರಳಿನಲ್ಲಿ ಬದುಕುವ ಹೀನ ಪರಿಸ್ಥಿತಿ ಉಲ್ಬಣಗೊಳ್ಳುತ್ತಿದೆ. ಇತ್ತ ಕೃಷಿಕರ ಶ್ರಮಕ್ಕೆ ಪ್ರತಿಫಲಸಿಗದೆ ನಿರಂತರ ಶೋಷಣೆಗೆ ಒಳಗಾಗುವ ಪರಿಸ್ಥಿತಿ

ನಿರ್ಮಾಣವಾಗುತ್ತಿದೆ. ಕೈಗಾರಿಕಾ ಉತ್ಪನ್ನಗಳಿಗೆ ಬೆಲೆನಿಗದಿಪಡಿಸುವಂತೆ ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸುವ ಸಂಕಲ್ಪ ಶಕ್ತಿಯೆ ಸರ್ಕಾರಕ್ಕಿಲ್ಲವಾಗಿದೆ. ಅಗತ್ಯವಿರದ ಬೃಹತ್ ಕೈಗಾರಿಕೆಗಳಿಂದಾಗಿ ಮಾನವಶಕ್ತಿ ಹರಣವಾಗುತ್ತಿದೆ. ಯಂತ್ರಗಳ ಬಳಕೆಯಿಂದ ಒಂದು ಕಡೆ ನಿರುದ್ಯೋಗ ತಾಂಡವವಾಡುತ್ತಿದ್ದರೆ ಮತ್ತೊಂದು ಕಡೆ ಪರಿಸರ ಮಲಿನತೆಯಿಂದ ಆವೃತವಾಗುತ್ತಿದೆ. ನದಿಗಳು ಕಲುಷಿತಗೊಳ್ಳುತ್ತಿವೆ. ಒಂದು ಕಾಲದಲ್ಲಿ ಕೈಗಾರಿಕೀಕರಣ ಅಥವಾ ನಾಶ ಎನ್ನುವುದಿತ್ತು ಈಗ ಕೈಗಾರಿಕೀಕರಣ ಮತ್ತು ನಾಶ ಎನ್ನುವ ಸ್ಥಿತಿ ತಲುಪಿದೆ. ಕಾರಣ ಮನುಷ್ಯನ ದುರಾಶೆಗೆ ಕಡಿವಾಣವಿಲ್ಲವಾಗಿದೆ.

ಈ ಎಲ್ಲದಕ್ಕೂ ಕಾರಣ ನಾವು ಗಾಂಧೀಜಿಯವರ ಗ್ರಾಮಸ್ವರಾಜ್ಯದ ಸ್ವಾವಲಂಬೀ ಬದುಕಿನಿಂದ ಹೊರಳಿದ್ದು. ಬಂಡವಾಳಶಾಹಿಗಳ ಪ್ರಾಬಲ್ಯಕ್ಕೆ ಮಣಿಯುತ್ತಿರುವ ಸರ್ಕಾರಗಳಿಂದಾಗಿ ಕೃಷಿಭೂಮಿಯನ್ನು ಹಾಗೂ ಗುಡ್ಡಗಾಡಿನಲ್ಲಿ ಬದುಕುತ್ತಿರುವ ಗಿರಿಜನರನ್ನು ಒಕ್ಕಲೆಬ್ಬಿಸಿ ಅವರನ್ನು ಅತಂತ್ರರನ್ನಾಗಿಸಿ ಪ್ರಕೃತಿಯ ಸಂಪತ್ತನ್ನು ಲೂಟಿಹೊಡೆಯಲು ಹುನ್ನಾರ ಹೂಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿಯೆ ಕುವೆಂಪು

'ಕತ್ತಿ ಪರದೇಶಿಯಾದರೆ ಮಾತ್ರನೋವೆ? ನಮ್ಮವರೆ ಹದ ಹಾಕಿ ತಿವಿದರದು ಹೂವೆ?' ಎಂದು ಪ್ರಶ್ನಿಸಿದ್ದು. ಬಹುರಾಷ್ಟ್ರೀಯ ಕಂಪೆನಿಗಳು, ಬಂಡವಾಳಶಾಹಿಗಳು ತಮ್ಮ ಹಿಡಿತವನ್ನು ಸರ್ಕಾರಗಳ ಮೇಲೆ ಹೇರಿ ಸರ್ವೋತ್ಕೃಷ್ಟ ಕೃಷಿ ಭೂಮಿಯನ್ನು ಕಬಳಿಸುವ ಬಕಾಸುರತನಕ್ಕೆ ಇಳಿದಿವೆ. ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿರುವ ಬಾಪು ಹೆದ್ದೂರ ಶೆಟ್ಟಿ ಅವರಿಗೆ ಈ ಅಂಶಗಳು ಅಪಥ್ಯವಾಗಿರುವುದು ಆಶ್ಚರ್ಯವುಂಟುಮಾಡುತ್ತದೆ.

ತನ್ನೆಲ್ಲ ತನವನ್ನು ಹಾಗೂ ಭವ್ಯ ಸಂಸ್ಕೃತಿಯನ್ನು ಕಳೆದುಕೊಂಡು ಪರಕೀಯ ಸಂಸ್ಕೃತಿಗೆ (ಭಾಷೆಯೂ ಸೇರಿದಂತೆ) ದಾಸನಾಗುತ್ತಿರುವ ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಮತ್ತೊಮ್ಮೆ ಎಚ್ಚೆತ್ತು ಸುರೇಂದ್ರ ಕೌಲಗಿಯವರು ಹೇಳುವಂತೆ ಗ್ರಾಮಗಳು ನಗರೀಕರಣದ ವಿರುದ್ಧ ಬಂಡಾಯದ ಬಾವುಟ ಹಾರಿಸದಿದ್ದರೆ, ಗ್ರಾಮಗಳ ಹಿಂದಿನ ಸ್ವಾವಲಂಬಿ ಜೀವನ ಮತ್ತೆ ಮರುಕಳಿಸದಿದ್ದರೆ, ಗ್ರಾಮಗಳಲ್ಲಿಯೇ ಮನೆಮನೆಗಳಲ್ಲಿ ಕರಕುಶಲ ತಯಾರಿಕ ಉದ್ಯೋಗಗಳು ನಡೆಯುವಂತಾಗದೆ ಹೋದರೆ, ನಗರದ ಕಡೆ ತಿರುಗಿರುವ ಮುಖ ಮತ್ತೆ ಗ್ರಾಮದ ಕಡೆ ತಿರುಗದೆ ಹೋದರೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಸಂದರ್ಭದಲ್ಲಿ ವಿನ್ಸ್‌ಟನ್ ಚರ್ಚಿಲ್ ಹೇಳಿದಂತೆ 'ಭವ್ಯಭಾರತ' ಕಳೆದುಹೋಗುತ್ತದೆ. ಅಂಥ ದುಸ್ಥಿತಿ ಭಾರತಕ್ಕೆ ಪ್ರಾಪ್ತಿಯಾಗದಿರಲಿ. ಗಾಂಧಿ ಪ್ರಣಿತ ಭಾರತದ ಪುನರ್ ನಿರ್ಮಾಣ ಜಾಗೃತವಾಗಲಿ.

– ಜ.ಹೊ.ನಾರಾಯಣಸ್ವಾಮಿ
ಹಾಸನ

ಜನಪದ ವಿಚಾರ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ.......

153 ಪ್ರೊ॥ ಕ್ಯಾಪ್ಟನ್ ವಿ.
ಅನ್ನಪೂರ್ಣ
#426
ವಿ.ಎಲ್.ಎನ್ ಪ್ರಭುದ್ದಾಲಯ
ನಿಸರ್ಗ ಬಡಾವಣೆ
ಬನ್ನೇರುಘಟ್ಟ ಅಂಚೆ
ಜಿಗಿಣಿಹೋಬಳಿ
ಬೆಂಗಳೂರು – 560083

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237